# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,
# ಮಲ್ಲೇಶ್ವರಂ, ಬೆಂಗಳೂರು – 3

## 2019-20 ನೇ ಸಾಲಿನ ಪುನರ್ ಪರಿಷ್ಕೃತ ಪಠ್ಯಾಧಾರಿತ

## ಎಸ್.ಎಸ್.ಎಲ್.ಸಿ. ಪರೀಕ್ಷೆ

# CCE - RF

## [ಶಾಲಾ ಅಭ್ಯರ್ಥಿಗಳಿಗಾಗಿ]

## ಪುನರ್ ಪರಿಷ್ಕೃತ ಪ್ರಶ್ನೆಪತ್ರಿಕೆಯ ವಿನ್ಯಾಸ

## ಹಾಗೂ

## ಮಾದರಿ ಪ್ರಶ್ನೆ ಪತ್ರಿಕೆ

## ವಿಷಯ : ತೃತೀಯ ಭಾಷೆ ಕನ್ನಡ

## ವಿಷಯ ಸಂಕೇತ: 62K

ಎನ್.ಸಿ.ಎಫ್‌ನ ಮುಖ್ಯ ಉದ್ದೇಶ ಗುಣಾತ್ಮಕ ಶಿಕ್ಷಣವನ್ನು ನೀಡುವುದಾಗಿದೆ. ಗುಣಾತ್ಮಕ ಶಿಕ್ಷಣವನ್ನು ನೀಡುವಲ್ಲಿ ಭಾಷಾ ಬೋಧಕರ ಪಾತ್ರ ಗುರುತರವಾದುದು. ಭಾಷಾ ಬಳಕೆಯ ವಿವಿಧ ಕೌಶಲಗಳನ್ನು ವಿದ್ಯಾರ್ಥಿಗಳಿಗೆ ಕಲಿಸುವುದು ಇಂದಿನ ದಿನಗಳಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸವಾಲೇ ಆಗಿದೆ. ಈ ಪ್ರಮುಖ ಭಾಷಾ ಕೌಶಲಗಳ ಜೊತೆಗೆ ಪ್ರೌಢಶಾಲಾ ಹಂತದಲ್ಲಿ ಚಿಂತನೆಮಾಡುವುದನ್ನೂ, ಅಭ್ಯಾಸ ಕೌಶಲ ಅಂದರೆ ಅಧ್ಯಯನ ಶೀಲತೆಯನ್ನೂ ಕಲಿಸಬೇಕಾಗುತ್ತದೆ. ಕ್ರಿಯಾತ್ಮಕ ವ್ಯಾಕರಣಾಂಶಗಳ, ಛಂದಸ್ಸು ಅಲಂಕಾರಗಳ ತಿಳುವಳಿಕೆಯನ್ನು ನೀಡುವುದರ ಜೊತೆಗೆ ಶಬ್ದಸಂಪತ್ತನ್ನು ಹೆಚ್ಚಿಸುತ್ತಾ, ರಚನಾ ಸಾಮರ್ಥ್ಯ, ಸ್ವಯಂ ಅಭಿವ್ಯಕ್ತಿ ಸಾಮರ್ಥ್ಯ, ಸಂವಹನ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ವಿದ್ಯಾರ್ಥಿಗಳಿಗೆ ಶಿಕ್ಷಕರು ಅವಕಾಶಗಳನ್ನು ಕಲ್ಪಿಸಿಕೊಡಬೇಕಾಗುತ್ತದೆ. ವಿದ್ಯಾರ್ಥಿಗಳು ಸಂಪೂರ್ಣವಾಗಿ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು, ಶಿಕ್ಷಕರು ವಿದ್ಯಾರ್ಥಿಗಳಿಗೆ ಪರಿಪೂರ್ಣ ಕಲಿಕಾ ಅನುಭವಗಳನ್ನು ನೀಡಲು ಪರೀಕ್ಷೆಗಳು ಪ್ರೇರಕ ಹಾಗೂ ಪೂರಕವಾಗಿವೆ.

- ಶಾಲಾಹಂತದ ಶಿಕ್ಷಣದಲ್ಲಿ ವಿದ್ಯಾರ್ಥಿಗಳ ಕಲಿಕಾ ಅನುಭವಗಳನ್ನು ಮತ್ತು ಗುಣಾತ್ಮಕ ಕಲಿಕೆಯನ್ನು ಒರೆಗೆ ಹಚ್ಚುವ ಸಾಧನವೇ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಎಸ್.ಎಸ್.ಎಲ್.ಸಿ ಪರೀಕ್ಷೆಯಾಗಿದೆ.
- ಕಲಿಕಾ ಕ್ಷೇತ್ರದಲ್ಲಿ ಆಗಿರುವ ಬದಲಾವಣೆಗೆ ಅನುಗುಣವಾಗಿ ವಿದ್ಯಾರ್ಥಿಗಳು ತಾರ್ಕಿಕ ಚಿಂತನೆಯನ್ನು ಬೆಳೆಸಿಕೊಂಡು ಸ್ಪರ್ಧಾತ್ಮಕ ಜಗತ್ತಿಗೆ ಹೊಂದಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ.
- ಪರೀಕ್ಷೆಯ ಗುರಿ ಕೇವಲ ಅಂಕಗಳಿಕೆ ಮಾತ್ರವಲ್ಲ, ಜೊತೆಗೆ ಶಿಕ್ಷಣದ ಆಶಯಕ್ಕೆ ಅನುಗುಣವಾಗಿ ವಿದ್ಯಾರ್ಥಿಗಳು ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳುವುದಕ್ಕೆ ಪ್ರಶ್ನೆ ಪತ್ರಿಕೆಗಳು ಪೂರಕವಾಗಿರಬೇಕಾಗುತ್ತದೆ. ಈ ದೃಷ್ಟಿಯಿಂದ ಎಸ್.ಎಸ್.ಎಲ್.ಸಿ ಪರೀಕ್ಷಾ ಪ್ರಶ್ನೆಪತ್ರಿಕೆಯ ಸ್ವರೂಪದಲ್ಲಿ ಬದಲಾವಣೆಗಳಾಗಿವೆ.
- ವಿದ್ಯಾರ್ಥಿಗಳ ತಾರ್ಕಿಕ ಚಿಂತನೆಯ ವೃದ್ಧಿಗೆ ಪೂರಕವಾಗಿ ಅಭಿವ್ಯಕ್ತಿ, ಪ್ರಶಂಸೆ ಹಾಗೂ ವಿವರಣಾತ್ಮಕ ಉತ್ತರಕ್ಕೆ ಹೆಚ್ಚು ಆದ್ಯತೆಯನ್ನು ನೀಡಿ ಉದ್ದಿಷ್ಟಗಳು, ಪಠ್ಯವಸ್ತು ಮತ್ತು ಪ್ರಶ್ನೆಗಳ ಸ್ವರೂಪಗಳಿಗೆ ಅನುಗುಣವಾಗಿ 2019–20ನೆಯ ಶೈಕ್ಷಣಿಕ ಸಾಲಿನ ತೃತೀಯ ಭಾಷೆ ಕನ್ನಡದ ನೀಲನಕಾಶೆಯನ್ನು ಸಿದ್ಧಪಡಿಸಲಾಗಿದೆ.

**2019–20ನೆಯ ಸಾಲಿನ ಶೈಕ್ಷಣಿಕ ವರ್ಷದ ಪ್ರಶ್ನೆಪತ್ರಿಕೆಯ ಸ್ವರೂಪದ ಬದಲಾವಣೆಗೆ ಅನುಗುಣವಾಗಿ ಕೆಳಕಂಡಂತೆ ಬದಲಾವಣೆಗಳನ್ನು ಮಾಡಲಾಗಿದೆ.**

**<u>ಪ್ರಮುಖಾಂಶಗಳು:</u>**

➢ 2018–19 ನೇ ಸಾಲಿನ ಪ್ರಶ್ನೆ ಪತ್ರಿಕೆಯ ವಿನ್ಯಾಸ ಹಾಗೂ ನೀಲ ನಕಾಶೆಯಲ್ಲಿ ಹಲಕೆಲವು ಬದಲಾವಣೆಗಳನ್ನು ಮಾಡಿ 2019–20ನೆಯ ಸಾಲಿನ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸಲಾಗುವುದು.

- ಪ್ರಶ್ನೆಗಳ ಸಂಖ್ಯೆಯನ್ನು 46 ರಿಂದ 38ಕ್ಕೆ ಇಳಿಸಲಾಗಿದೆ. ಒಂದು ಅಂಕದ 16 ಪ್ರಶ್ನೆಗಳು, ಎರಡು ಅಂಕದ 08 ಪ್ರಶ್ನೆಗಳು, ಮೂರು ಅಂಕದ 09 ಪ್ರಶ್ನೆಗಳು ನಾಲ್ಕು ಅಂಕದ 04 ಪ್ರಶ್ನೆಗಳು ಹಾಗೂ ಐದು ಅಂಕದ 01 ಪ್ರಶ್ನೆಯಿರುತ್ತದೆ.
- ಪ್ರಶ್ನೆಯ ಸ್ವರೂಪಕ್ಕೆ ಸಂಬಂಧಿಸಿದಂತೆ ವಸ್ತುನಿಷ್ಠಪ್ರಶ್ನೆಗಳಲ್ಲಿ ಬಹುಆಯ್ಕೆಯ ಪ್ರಶ್ನೆಗಳ ಜೊತೆಗೆ ಸಂಬಂಧೀಕರಿಸುವ ಪ್ರಶ್ನೆಗಳನ್ನು ಸೇರಿಸಲಾಗಿದೆ.
- ವಸ್ತುನಿಷ್ಠಪ್ರಶ್ನೆಗಳಲ್ಲಿ ವ್ಯಾಕರಣದ ಜೊತೆಗೆ ಗದ್ಯ ಮತ್ತು ಪದ್ಯದ ವಿಷಯಗಳನ್ನು ಕೊಡಲಾಗಿದೆ.
- ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲತೆ, ಅಧ್ಯಯನ ಶೀಲತೆ, ಸೃಜನಶೀಲತೆಯನ್ನು ಬೆಳೆಸುವ ದೃಷ್ಟಿಯಿಂದ ವ್ಯಾಕರಣ ಹಾಗೂ ಪಠ್ಯವಿಷಯಕ್ಕೆ ಸಂಬಂಧಿಸಿದಂತೆ ಅಭ್ಯಾಸದ ಪ್ರಶ್ನೆಗಳಲ್ಲದೆ ಪಠ್ಯದ ಒಳಗಿನಿಂದಲೂ ಬೇರೆ ಯಾವುದಾದರೂ ಪ್ರಶ್ನೆಗಳನ್ನು ಕೊಡಲು ಅವಕಾಶವಿದೆ.
- ಒಂದು ಮತ್ತು ಎರಡು ಅಂಕಗಳ ಪ್ರಶ್ನೆಗಳನ್ನು 40%ಗೆ ಸೀಮಿತಗೊಳಿಸಿ ಮೂರು ಅಂಕಗಳ ಪ್ರಶ್ನೆಗಳನ್ನು ಸೇರಿಸಿ, ವಿದ್ಯಾರ್ಥಿಗಳಲ್ಲಿ ಬರೆಯುವ ಕೌಶಲ್ಯವನ್ನು ಬೆಳೆಸಿಕೊಳ್ಳಲು ಪ್ರಾಶಸ್ತ್ಯವನ್ನು ನೀಡಲಾಗಿದೆ.
- ಗಾದೆ ಮತ್ತು ಪ್ರಬಂಧಗಳಿಗೆ ಮೂರು ಆಯ್ಕೆಯ ಬದಲಿಗೆ ಎರಡು ಆಯ್ಕೆಗಳನ್ನು ಮಾತ್ರ ನೀಡಲಾಗಿದೆ.
- ಪದ್ಯ ಭಾಗವನ್ನು ಪೂರ್ಣಗೊಳಿಸುವ ಪ್ರಶ್ನೆಗೆ ಮೂರು ಅಂಕದ ಬದಲಿಗೆ ನಾಲ್ಕು ಅಂಕಗಳನ್ನು ನೀಡಲಾಗಿದೆ.
- ನಾಲ್ಕು ಅಂಕದ ಪದ್ಯ ಮತ್ತು ಗದ್ಯಭಾಗದ ಪ್ರಶ್ನೆಗಳ ಬದಲಿಗೆ ಗದ್ಯಭಾಗದ ಪ್ರಶ್ನೆಯನ್ನು ಮಾತ್ರ ನೀಡಲಾಗಿದೆ.
- ಪತ್ರಲೇಖನಕ್ಕೆ ನಾಲ್ಕು ಅಂಕದ ಬದಲಿಗೆ ಐದು ಅಂಕಗಳನ್ನು ನಿಗದಿಪಡಿಸಲಾಗಿದೆ.
- ಕಠಿಣತೆಯ ಮಟ್ಟವನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ. (ಸುಲಭಕ್ಕೆ 30% ಸಾಧಾರಣಕ್ಕೆ 50% ಕಠಿಣತೆಗೆ 20%)
- ಗ್ರಹಿಕೆಯ ಪ್ರಶ್ನೆಗಳನ್ನು ಕಡಿಮೆಮಾಡಿ ಅಭಿವ್ಯಕ್ತಿಗೆ ಹೆಚ್ಚು ಆದ್ಯತೆಯನ್ನು ನೀಡಿ ವಿದ್ಯಾರ್ಥಿಗಳಲ್ಲಿ ಭಾಷಾಕೌಶಲವನ್ನು ಬೆಳೆಸಿಕೊಳ್ಳಲು ಅವಕಾಶವನ್ನು ಕಲ್ಪಿಸಲಾಗಿದೆ.
- ಹಿಂದಿನ ಸಾಲಿನ ನೀಲ ನಕಾಶೆಗಳಂತೆ ಘಟಕವಾರು ಅಂಕ ಹಂಚಿಕೆಯನ್ನು ನಿಗದಿಪಡಿಸದೆ ಪಠ್ಯ ವಸ್ತುವಿಗೆ ಆದ್ಯತೆಯನ್ನು ನೀಡಲಾಗಿದೆ.
- ನೀಲ ನಕಾಶೆಯನ್ನು ಶಿಕ್ಷಕರ / ವಿದ್ಯಾರ್ಥಿಗಳಿಗೆ ಮಾಹಿತಿಗಾಗಿ <u>ನೀಡಲಾಗುವುದಿಲ್ಲ</u>. ಉದ್ದಿಷ್ಟ, ಪ್ರಶ್ನೆಯ ಸ್ವರೂಪ, ಪಠ್ಯ ವಸ್ತು ಮತ್ತು ಪ್ರಶ್ನೆಯ ಸಂಖ್ಯೆಗಳನ್ನು ಆಧರಿಸಿ ಶಿಕ್ಷಕರೇ ನೀಲ ನಕಾಶೆಯನ್ನು ಸಿದ್ಧಪಡಿಸಿಕೊಂಡು ವಿದ್ಯಾರ್ಥಿಗಳಿಗೆ ತರಬೇತಿ ನೀಡಿ, ಎಸ್. ಎಸ್. ಎಲ್. ಸಿ ಪಬ್ಲಿಕ್ ಪರೀಕ್ಷೆಗೆ ಅಣಿಗೊಳಿಸ ಬೇಕಾಗುತ್ತದೆ.
- ವಿದ್ಯಾರ್ಥಿಗಳು ಸಮಗ್ರ ಅಧ್ಯಯನ ಮಾಡುವುದಕ್ಕೆ ಪೂರಕವಾಗಿ ಪಠ್ಯ ವಸ್ತುವಿಗೆ ಅನುಗುಣವಾಗಿ ಪ್ರಶ್ನೆಗಳ ಸ್ವರೂಪವನ್ನು ಬದಲಾಯಿಸಿಕೊಳ್ಳಲು ಅವಕಾಶವಿರುತ್ತದೆ.
- ಒಟ್ಟಾರೆಯಾಗಿ ಸಮಗ್ರವಾಗಿ ಕಲಿಸುವುದು ಮತ್ತು ಕಲಿಯುವುದನ್ನು ಪ್ರೋತ್ಸಾಹಿಸಿದೆ.

➢ ಪಠ್ಯ ಪುಸ್ತಕದಲ್ಲಿ ಇರುವ ವ್ಯಾಕರಣಾಂಶಗಳಲ್ಲಿ ಈ ಕೆಳಕಾಣುವ ಅಂಶಗಳನ್ನು ಆಧರಿಸಿ ವಸ್ತುನಿಷ್ಠ ಪ್ರಶ್ನೆಗಳನ್ನು ತಯಾರಿಸಿಕೊಳ್ಳುವುದು. ವಿದ್ಯಾರ್ಥಿಗಳಲ್ಲಿ ತಾರ್ಕಿಕ ಆಲೋಚನಾ ಮನೋಭಾವನೆಯನ್ನು ಬೆಳೆಸುವ ದೃಷ್ಟಿಯಿಂದ ಪಠ್ಯ ಪುಸ್ತಕದ ಅಭ್ಯಾಸದ ಪ್ರಶ್ನೆಗಳನ್ನು ಹೊರತುಪಡಿಸಿಯೂ ಪಠ್ಯವಸ್ತುವಿಗೆ ಸಂಬಂಧಿಸಿದಂತೆ ಬೇರೆ ಪ್ರಶ್ನೆಗಳನ್ನು ಕೊಡಲು ಅವಕಾಶವಿರುವುದರಿಂದ ವಿದ್ಯಾರ್ಥಿಗಳಿಗೆ ಸೂಕ್ತರೀತಿಯಲ್ಲಿ ತರಬೇತಿಯನ್ನು ನೀಡುವುದು.

<u>ಪಠ್ಯ ಪುಸ್ತಕದಲ್ಲಿರುವ ವ್ಯಾಕರಣಾಂಶಗಳು</u>

1. ಕನ್ನಡ ಅಕ್ಷರಮಾಲೆ, ಗುಣಿತಾಕ್ಷರ, ಸಂಯುಕ್ತಾಕ್ಷರ ಇವುಗಳಲ್ಲಿ ಯಾವುದಾದರೂ ಒಂದು
2. ನಾಮಪದಗಳು
3. ಸರ್ವನಾಮ
4. ಕ್ರಿಯಾಪದಗಳು
5. ಲಿಂಗಗಳು ಅಥವಾ ವಚನಗಳು
6. ವಿಭಕ್ತಿ ಪ್ರತ್ಯಯಗಳು
7. ಕನ್ನಡ ಸಂಧಿಗಳು ಅಥವಾ ಸಂಸ್ಕೃತ ಸಂಧಿಗಳು,
8. ಸಮಾಸಗಳು
9. ವಾಕ್ಯಗಳ ವಿಧಗಳು
10. ಲೇಖನ ಚಿಹ್ನೆಗಳು
11. ಅನ್ಯದೇಶೀಯ ಪದಗಳು ಅಥವಾ ಗ್ರಾಂಥಿಕರೂಪ
12. ವಿರುದ್ಧಪದ, ಸಮಾನಾರ್ಥಕಪದ, ನಾನಾರ್ಥಪದ ಇವುಗಳಲ್ಲಿ ಯಾವುದಾದರೂ ಒಂದು
13. ಅನುಕರಣಾವ್ಯಯ ಅಥವಾ ದ್ವಿರುಕ್ತಿ
14. ನುಡಿಗಟ್ಟು ಅಥವಾ ಜೋಡುನುಡಿ
15. ತತ್ಸಮ–ತದ್ಭವ
16. ಅಲಂಕಾರ ಅಥವಾ ಛಂದಸ್ಸು

<u>ಮೇಲಿನ ಹದಿನಾರರಲ್ಲಿ ಯಾವುದಾದರೂ ಎಂಟನ್ನು ಕೊಡಲು ಅವಕಾಶವಿರುತ್ತದೆ.</u>

*********************

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

# ಮಲ್ಲೇಶ್ವರಂ, ಬೆಂಗಳೂರು – 3

## 2019-20 ನೇ ಸಾಲಿನ ಪುನರ್ ಪರಿಷ್ಕೃತ ಪಠ್ಯಾಧಾರಿತ

# ಎಸ್.ಎಸ್.ಎಲ್.ಸಿ. ಪರೀಕ್ಷೆ

## ಅಪೇಕ್ಷಿತ ಬದಲಾವಣೆಗೆಯನ್ನು ಆಧರಿಸಿ ಪ್ರಶ್ನೆ ಪತ್ರಿಕೆಯ ವಿನ್ಯಾಸ

# CCE - RF

## [ಶಾಲಾ ಅಭ್ಯರ್ಥಿಗಳಿಗಾಗಿ]

## ವಿಷಯ : ತೃತೀಯ ಭಾಷೆ ಕನ್ನಡ (62K)

**ಗರಿಷ್ಠ ಅಂಕಗಳು : 80** **ಅವಧಿ : 2–30 ಗಂಟೆಗಳು**

1. ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

| ಉದ್ದಿಷ್ಟಗಳು | ಪ್ರತಿಶತ | | ದತ್ತ ಅಂಕಗಳು | |
|---|---|---|---|---|
| | 2018–19 | 2019–20 | 2018–19 | 2019–20 |
| ಸ್ಮರಣೆ | 20 | 20 | 16 | 16 |
| ಗ್ರಹಿಕೆ | 40 | 34 | 32 | 27 |
| ಅಭಿವ್ಯಕ್ತಿ | 37 | 43 | 29 | 34 |
| ಪ್ರಶಂಸೆ | 03 | 03 | 03 | 03 |
| ಒಟ್ಟು | 100 | 100 | 80 | 80 |

## 2. ವಿಷಯಾನುಸಾರ ಪ್ರಾಮುಖ್ಯತೆ :

| ವಿಷಯ/ ಉಪಘಟಕ | ಪ್ರತಿಶತ | | ದತ್ತ ಅಂಕಗಳು | |
|---|---|---|---|---|
| | 2018–19 | 2019–20 | 2018–19 | 2019–20 |
| ಗದ್ಯ | 31 | 34 | 25 | 27 |
| ಪದ್ಯ | 30 | 32 | 24 | 25 |
| ಪಠ್ಯ ಪೋಷಕ ಅಧ್ಯಯನ | 05 | 05 | 04 | 04 |
| ವ್ಯಾಕರಣ<br>ವಾಕ್ಯ ರಚನೆ | 34 | 29 | 27 | 24 |
| ಒಟ್ಟು | **100** | **100** | **80** | **80** |

## 3. ಪ್ರಶ್ನಾನುಸಾರ ಪ್ರಾಮುಖ್ಯತೆ :

| ಪ್ರಶ್ನೆಗಳ ವಿಧಗಳು | ಪ್ರತಿಶತ | ದತ್ತ ಅಂಕಗಳು | | ಪ್ರಶ್ನೆಗಳ ಸಂಖ್ಯೆ | | ನಿಗದಿತ ಸಮಯ |
|---|---|---|---|---|---|---|
| | 2019–20 | 2018–19 | 2019–20 | 2018–19 | 2019–20 | |
| ವಸ್ತುನಿಷ್ಠ & ಸಂಬಂಧೀಕರಿಸಿ | 15 | 12 | 12 | 12 | 12 | 15 ನಿ. |
| ಕಿರು ಉತ್ತರಗಳು (1) | 05 | 14 | 04 | 14 | 04 | 05 ನಿ. |
| ಕಿರು ಉತ್ತರಗಳು (2) | 20 | 20 | 16 | 10 | 08 | 28 ನಿ. |
| ದೀರ್ಘ ಉತ್ತರಗಳು (1) | 34 | 18 | 27 | 06 | 09 | 50 ನಿ |
| ದೀರ್ಘ ಉತ್ತರಗಳು (2) | 20 | 16 | 16 | 04 | 04 | 30 ನಿ |
| ದೀರ್ಘ ಉತ್ತರಗಳು (3) | 06 | – | 05 | – | 01 | 07 ನಿ |
| ಒಟ್ಟು | **100** | **80** | **80** | **46** | **38** | **135+15** ನಿಮಿಷಗಳು |

## 4. ಕಠಿಣತೆಯ ಮಟ್ಟ :

| ಸುಲಭ | ಸಾಧಾರಣ | ಕಠಿಣ | ಒಟ್ಟು |
|---|---|---|---|
| 30% (24) | 50% (40) | 20% (16) | 100% (80) |

## 5. ಪ್ರಶ್ನೆಗಳ ಸ್ವರೂಪ ಮತ್ತು ಅಂಕ ವಿತರಣೆ:

| ಪ್ರಶ್ನೆಗಳ ಸ್ವರೂಪ | ಪ್ರಶ್ನೆಗಳು | ಅಂಕಗಳು |
|---|---|---|
| ಬಹು ಆಯ್ಕೆ & ಸಂಬಂಧೀಕರಿಸಿ ಪ್ರಶ್ನೆಗಳು | 01 ಅಂಕದ 12 ಪ್ರಶ್ನೆಗಳು | 01 X 12 = 12 |
| ಒಂದು ವಾಕ್ಯದಲ್ಲಿ ಉತ್ತರಿಸುವುದು | 01 ಅಂಕದ 04 ಪ್ರಶ್ನೆಗಳು | 01 X 04 = 04 |
| 3–4 ವಾಕ್ಯಗಳಲ್ಲಿ ಉತ್ತರಿಸುವುದು | 02 ಅಂಕಗಳ 08 ಪ್ರಶ್ನೆಗಳು | 02 X 08 = 16 |
| 5–6 ವಾಕ್ಯಗಳಲ್ಲಿ ಉತ್ತರಿಸುವುದು | 03 ಅಂಕಗಳ 09 ಪ್ರಶ್ನೆಗಳು | 03 X 09 = 27 |
| 8–10 ವಾಕ್ಯಗಳಲ್ಲಿ ಉತ್ತರಿಸುವುದು & ಪ್ರಬಂಧ ವಿವರವಾಗಿ ಉತ್ತರಿಸುವುದು | 04 ಅಂಕಗಳ 04 ಪ್ರಶ್ನೆಗಳು | 04 X 04 = 16 |
| ಪತ್ರ ಲೇಖನ | 05 ಅಂಕಗಳ 01 ಪ್ರಶ್ನೆಗಳು | 05 X 01 = 05 |
| ಒಟ್ಟು | 38 ಪ್ರಶ್ನೆಗಳು | 80 ಅಂಕಗಳು |

## 6. ಪ್ರಶ್ನೆ ಪತ್ರಿಕೆ ಅಂಕ ವಿತರಣೆ :

ಗದ್ಯ : 27
ಪದ್ಯ : 25
ಪಠ್ಯ ಪೋಷಕ ಅಧ್ಯಯನ : 04
ವ್ಯಾಕರಣ, ಗಾದೆ, ಅಪಠಿತ ಗದ್ಯ ಮತ್ತು ವಾಕ್ಯರಚನೆ : 24
ಒಟ್ಟು : 80
ಅವಧಿ : 2–30 ಗಂಟೆಗಳು

| ಪ್ರಶ್ನೆಗಳ ಸ್ವರೂಪ | ಗದ್ಯ | ಪದ್ಯ | ಪೋಷಕ ಅಧ್ಯಯನ | ವ್ಯಾಕರಣ | ವಾಕ್ಯರಚನೆ & ಅಪಠಿತಗದ್ಯ | ಒಟ್ಟು |
|---|---|---|---|---|---|---|
| 1. ಬಹು ಆಯ್ಕೆ & 2. ಸಂಬಂಧೀಕರಿಸಿ | 02 | 02 | – | 08 | – | 12 |
| 3. ಒಂದು ವಾಕ್ಯದ ಉತ್ತರಗಳು | 01 | 01 | 2 | – | – | 04 |
| 4. ಮೂರು ನಾಲ್ಕು ವಾಕ್ಯಗಳ ಉತ್ತರಗಳು | 08 | 06 | 02 | – | – | 16 |
| 5. ಸಂದರ್ಭಗಳು & | 03 | 03 | – | – | – | 06 |
| 6. ಐದಾರು ವಾಕ್ಯಗಳ ಉತ್ತರಗಳು | 06 | 06 | | | | 12 |
| 7. ಕವಿ ಕೃತಿ ವಿಚಾರ | 03 | 03 | – | – | – | 06 |
| 8. ಗಾದೆಗಳು | – | – | – | – | 03 | 03 |
| 9. ಎಂಟು/ಹತ್ತು ವಾಕ್ಯಗಳ ಉತ್ತರಗಳು | – | 04 | – | – | – | 04 |
| 10. ಕಂಠಪಾಠ | 04 | – | – | – | – | 04 |
| 11. ಅಪಠಿತ ಗದ್ಯ | – | – | – | – | 04 | 04 |
| 12. ಪ್ರಬಂಧ | – | – | – | – | 04 | 04 |
| 13. ಪತ್ರ | | | | | 05 | 05 |
| ಒಟ್ಟು | 27 | 25 | 04 | 08 | 16 | 80 |

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,
# ಮಲ್ಲೇಶ್ವರಂ, ಬೆಂಗಳೂರು – 3

# 2019-20 ನೇ ಸಾಲಿನ ಪುನರ್ ಪರಿಷ್ಕೃತ ಪಠ್ಯಾಧಾರಿತ

# ಎಸ್.ಎಸ್.ಎಲ್.ಸಿ. ಪರೀಕ್ಷೆ

# CCE - PF

## [ಖಾಸಗಿ ಅಭ್ಯರ್ಥಿಗಳಿಗಾಗಿ]

## ಪುನರ್ ಪರಿಷ್ಕೃತ ಪ್ರಶ್ನೆಪತ್ರಿಕೆಯ ವಿನ್ಯಾಸ
## ಹಾಗೂ
## ಮಾದರಿ ಪ್ರಶ್ನೆ ಪತ್ರಿಕೆ

## ವಿಷಯ : ತೃತೀಯ ಭಾಷೆ ಕನ್ನಡ

## ವಿಷಯ ಸಂಕೇತ: 62K

ಎನ್.ಸಿ.ಎಫ್‌ನ ಮುಖ್ಯ ಉದ್ದೇಶ ಗುಣಾತ್ಮಕ ಶಿಕ್ಷಣವನ್ನು ನೀಡುವುದಾಗಿದೆ. ಗುಣಾತ್ಮಕ ಶಿಕ್ಷಣವನ್ನು ನೀಡುವಲ್ಲಿ ಭಾಷಾ ಬೋಧಕರ ಪಾತ್ರ ಗುರುತರವಾದುದು. ಭಾಷಾ ಬಳಕೆಯ ವಿವಿಧ ಕೌಶಲಗಳನ್ನು ವಿದ್ಯಾರ್ಥಿಗಳಿಗೆ ಕಲಿಸುವುದು ಇಂದಿನ ದಿನಗಳಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸವಾಲೇ ಆಗಿದೆ. ಈ ಪ್ರಮುಖ ಭಾಷಾ ಕೌಶಲಗಳ ಜೊತೆಗೆ ಪ್ರೌಢಶಾಲಾ ಹಂತದಲ್ಲಿ ಚಿಂತನೆಮಾಡುವುದನ್ನೂ, ಅಭ್ಯಾಸ ಕೌಶಲ ಅಂದರೆ ಅಧ್ಯಯನ ಶೀಲತೆಯನ್ನೂ ಕಲಿಸಬೇಕಾಗುತ್ತದೆ. ಕ್ರಿಯಾತ್ಮಕ ವ್ಯಾಕರಣಾಂಶಗಳ, ಛಂದಸ್ಸು ಅಲಂಕಾರಗಳ ತಿಳುವಳಿಕೆಯನ್ನು ನೀಡುವುದರ ಜೊತೆಗೆ ಶಬ್ದಸಂಪತ್ತನ್ನು ಹೆಚ್ಚಿಸುತ್ತಾ, ರಚನಾ ಸಾಮರ್ಥ್ಯ, ಸ್ವಯಂ ಅಭಿವ್ಯಕ್ತಿ ಸಾಮರ್ಥ್ಯ, ಸಂವಹನ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶಗಳನ್ನು ಕಲ್ಪಿಸಿಕೊಡಬೇಕಾಗುತ್ತದೆ. ವಿದ್ಯಾರ್ಥಿಗಳು ಸಂಪೂರ್ಣವಾಗಿ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು, ಪರಿಪೂರ್ಣ ಕಲಿಕಾ ಅನುಭವಗಳನ್ನು ಪಡೆದುಕೊಳ್ಳಲು ಪರೀಕ್ಷೆಗಳು ಪ್ರೇರಕ ಹಾಗೂ ಪೂರಕವಾಗಿವೆ.

- ಶಾಲಾಹಂತದ ಶಿಕ್ಷಣದಲ್ಲಿ ವಿದ್ಯಾರ್ಥಿಗಳ ಕಲಿಕಾ ಅನುಭವಗಳನ್ನು ಮತ್ತು ಗುಣಾತ್ಮಕ ಕಲಿಕೆಯನ್ನು ಒರೆಗೆ ಹಚ್ಚುವ ಸಾಧನವೇ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಎಸ್.ಎಸ್.ಎಲ್.ಸಿ ಪರೀಕ್ಷೆಯಾಗಿದೆ.
- ಕಲಿಕಾ ಕ್ಷೇತ್ರದಲ್ಲಿ ಆಗಿರುವ ಬದಲಾವಣೆಗೆ ಅನುಗುಣವಾಗಿ ವಿದ್ಯಾರ್ಥಿಗಳು ತಾರ್ಕಿಕ ಚಿಂತನೆಯನ್ನು ಬೆಳೆಸಿಕೊಂಡು ಸ್ಪರ್ಧಾತ್ಮಕ ಜಗತ್ತಿಗೆ ಹೊಂದಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ.
- ಪರೀಕ್ಷೆಯ ಗುರಿ ಕೇವಲ ಅಂಕಗಳಿಕೆ ಮಾತ್ರವಲ್ಲ, ಜೊತೆಗೆ ಶಿಕ್ಷಣದ ಆಶಯಕ್ಕೆ ಅನುಗುಣವಾಗಿ ವಿದ್ಯಾರ್ಥಿಗಳು ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳುವುದಕ್ಕೆ ಪ್ರಶ್ನೆ ಪತ್ರಿಕೆಗಳು ಪೂರಕವಾಗಿರಬೇಕಾಗುತ್ತದೆ. ಈ ದೃಷ್ಟಿಯಿಂದ ಎಸ್.ಎಸ್.ಎಲ್.ಸಿ ಪರೀಕ್ಷಾ ಪ್ರಶ್ನೆಪತ್ರಿಕೆಯ ಸ್ವರೂಪದಲ್ಲಿ ಬದಲಾವಣೆಗಳಾಗಿವೆ.
- ವಿದ್ಯಾರ್ಥಿಗಳ ತಾರ್ಕಿಕ ಚಿಂತನೆಯ ವೃದ್ಧಿಗೆ ಪೂರಕವಾಗಿ ಅಭಿವ್ಯಕ್ತಿ, ಪ್ರಶಂಸೆ ಹಾಗೂ ವಿವರಣಾತ್ಮಕ ಉತ್ತರಕ್ಕೆ ಹೆಚ್ಚು ಆದ್ಯತೆಯನ್ನು ನೀಡಿ ಉದಿಷ್ಟಗಳು, ಪಠ್ಯವಸ್ತು ಮತ್ತು ಪ್ರಶ್ನೆಗಳ ಸ್ವರೂಪಗಳಿಗೆ ಅನುಗುಣವಾಗಿ 2019–20ನೆಯ ಶೈಕ್ಷಣಿಕ ಸಾಲಿನ ತೃತೀಯ ಭಾಷೆ ಕನ್ನಡದ ನೀಲನಕಾಶೆಯನ್ನು ಸಿದ್ಧಪಡಿಸಲಾಗಿದೆ.

**2019–20ನೆಯ ಸಾಲಿನ ಶೈಕ್ಷಣಿಕ ವರ್ಷದ ಪ್ರಶ್ನೆಪತ್ರಿಕೆಯ ಸ್ವರೂಪದ ಬದಲಾವಣೆಗೆ ಅನುಗುಣವಾಗಿ ಕೆಳಕಂಡಂತೆ ಬದಲಾವಣೆಗಳನ್ನು ಮಾಡಲಾಗಿದೆ.**

**ಪ್ರಮುಖಾಂಶಗಳು:**

- 2018–19 ನೇ ಸಾಲಿನ ಪ್ರಶ್ನೆ ಪತ್ರಿಕೆಯ ವಿನ್ಯಾಸ ಹಾಗೂ ನೀಲ ನಕಾಶೆಯಲ್ಲಿ ಹಲಕೆಲವು ಬದಲಾವಣೆಗಳನ್ನು ಮಾಡಿ 2019–20ನೆಯ ಸಾಲಿನ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸಲಾಗುವುದು.
- ಪ್ರಶ್ನೆಗಳ ಸಂಖ್ಯೆಯನ್ನು 58 ರಿಂದ 47ಕ್ಕೆ ಇಳಿಸಲಾಗಿದೆ. ಒಂದು ಅಂಕದ 20 ಪ್ರಶ್ನೆಗಳು, ಎರಡು ಅಂಕದ 10 ಪ್ರಶ್ನೆಗಳು, ಮೂರು ಅಂಕದ 11 ಪ್ರಶ್ನೆಗಳು ನಾಲ್ಕು ಅಂಕದ 03 ಪ್ರಶ್ನೆಗಳು ಹಾಗೂ ಐದು ಅಂಕದ 03 ಪ್ರಶ್ನೆಯಿರುತ್ತದೆ.

- ಪದ್ಯ ಭಾಗವನ್ನು ಪೂರ್ಣಗೊಳಿಸುವ ಪ್ರಶ್ನೆಗೆ ಮೂರು ಅಂಕದ ಬದಲಿಗೆ ನಾಲ್ಕು ಅಂಕಗಳನ್ನು ನೀಡಲಾಗಿದೆ.
- ಪ್ರಶ್ನೆಯ ಸ್ವರೂಪಕ್ಕೆ ಸಂಬಂಧಿಸಿದಂತೆ ವಸ್ತುನಿಷ್ಠಪ್ರಶ್ನೆಗಳಲ್ಲಿ ಬಹುಆಯ್ಕೆಯ ಪ್ರಶ್ನೆಗಳ ಜೊತೆಗೆ ಸಂಬಂಧೀಕರಿಸುವ ಪ್ರಶ್ನೆಗಳನ್ನು ಸೇರಿಸಲಾಗಿದೆ.
- ವಸ್ತುನಿಷ್ಠಪ್ರಶ್ನೆಗಳಲ್ಲಿ ವ್ಯಾಕರಣದ ಜೊತೆಗೆ ಗದ್ಯ ಮತ್ತು ಪದ್ಯದ ವಿಷಯಗಳನ್ನು ಕೊಡಲಾಗಿದೆ.
- ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲತೆ, ಅಧ್ಯಯನ ಶೀಲತೆ, ಸೃಜನಶೀಲತೆಯನ್ನು ಬೆಳೆಸುವ ದೃಷ್ಟಿಯಿಂದ ವ್ಯಾಕರಣ ಹಾಗೂ ಪಠ್ಯವಿಷಯಕ್ಕೆ ಸಂಬಂಧಿಸಿದಂತೆ ಅಭ್ಯಾಸದ ಪ್ರಶ್ನೆಗಳಲ್ಲದೆ ಪಠ್ಯದ ಒಳಗಿನಿಂದಲೂ ಬೇರೆ ಯಾವುದಾದರೂ ಪ್ರಶ್ನೆಗಳನ್ನು ಕೊಡಲು ಅವಕಾಶವಿದೆ.
- ಒಂದು ಮತ್ತು ಎರಡು ಅಂಕಗಳ ಪ್ರಶ್ನೆಗಳನ್ನು 40%ಗೆ ಸೀಮಿತಗೊಳಿಸಿ ಮೂರು ಅಂಕಗಳ ಪ್ರಶ್ನೆಗಳನ್ನು ಸೇರಿಸಿ, ವಿದ್ಯಾರ್ಥಿಗಳಲ್ಲಿ ಬರೆಯುವ ಕೌಶಲ್ಯವನ್ನು ಬೆಳೆಸಿಕೊಳ್ಳಲು ಪ್ರಾಶಸ್ತ್ಯವನ್ನು ನೀಡಲಾಗಿದೆ.
- ಗಾದೆ ಮತ್ತು ಪ್ರಬಂಧಗಳಿಗೆ ಮೂರು ಆಯ್ಕೆಯ ಬದಲಿಗೆ ಎರಡು ಆಯ್ಕೆಗಳನ್ನು ಮಾತ್ರ ನೀಡಲಾಗಿದೆ.
- ಪದ್ಯ ಭಾಗವನ್ನು ಪೂರ್ಣಗೊಳಿಸುವ ಪ್ರಶ್ನೆಗೆ ಮೂರು ಅಂಕದ ಬದಲಿಗೆ ನಾಲ್ಕು ಅಂಕಗಳನ್ನು ನೀಡಲಾಗಿದೆ.
- ನಾಲ್ಕು ಅಂಕದ ಪದ್ಯ ಮತ್ತು ಗದ್ಯಭಾಗದ ಪ್ರಶ್ನೆಗಳ ಬದಲಿಗೆ ಗದ್ಯಭಾಗದ ಪ್ರಶ್ನೆಯನ್ನು ಮಾತ್ರ ನೀಡಲಾಗಿದೆ.
- ನಾಲ್ಕು ಅಂಕಗಳಿಗೆ ಪದ್ಯದ ಸಾರಾಂಶವನ್ನು ಬರೆಯುವ ಪ್ರಶ್ನೆಯನ್ನು ಹೊಸದಾಗಿ ಸೇರಿಸಲಾಗಿದೆ.
- ಅಪಠಿತಗದ್ಯಭಾಗ, ಪ್ರಬಂಧ ಮತ್ತು ಪತ್ರಲೇಖನ ಪ್ರಶ್ನೆಗಳಿಗೆ ನಾಲ್ಕು ಅಂಕದ ಬದಲು ಐದು ಅಂಕಗಳನ್ನು ನಿಗದಿಪಡಿಸಲಾಗಿದೆ.
- ಕಠಿಣತೆಯ ಮಟ್ಟವನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ. (ಸುಲಭಕ್ಕೆ 30% ಸಾಧಾರಣಕ್ಕೆ 50% ಕಠಿಣತೆಗೆ 20%)
- ಗ್ರಹಿಕೆಯ ಪ್ರಶ್ನೆಗಳನ್ನು ಕಡಿಮೆಮಾಡಿ ಅಭಿವ್ಯಕ್ತಿಗೆ ಹೆಚ್ಚು ಆದ್ಯತೆಯನ್ನು ನೀಡಿ ವಿದ್ಯಾರ್ಥಿಗಳಲ್ಲಿ ಭಾಷಾಕೌಶಲವನ್ನು ಬೆಳೆಸಿಕೊಳ್ಳಲು ಅವಕಾಶವನ್ನು ಕಲ್ಪಿಸಲಾಗಿದೆ.
- ಹಿಂದಿನ ಸಾಲಿನ ನೀಲ ನಕಾಶೆಗಳಂತೆ ಘಟಕವಾರು ಅಂಕ ಹಂಚಿಕೆಯನ್ನು ನಿಗದಿಪಡಿಸದೆ ಪಠ್ಯ ವಸ್ತುವಿಗೆ ಆದ್ಯತೆಯನ್ನು ನೀಡಲಾಗಿದೆ.
- ನೀಲ ನಕಾಶೆಯನ್ನು ಶಿಕ್ಷಕರ / ವಿದ್ಯಾರ್ಥಿಗಳಿಗೆ ಮಾಹಿತಿಗಾಗಿ ನೀಡಲಾಗುವುದಿಲ್ಲ. ಉದ್ದಿಷ್ಟ, ಪ್ರಶ್ನೆಯ ಸ್ವರೂಪ, ಪಠ್ಯ ವಸ್ತು ಮತ್ತು ಪ್ರಶ್ನೆಯ ಸಂಖ್ಯೆಗಳನ್ನು ಆಧರಿಸಿ ನೀಲ ನಕಾಶೆಯನ್ನು ತಾವೇ ಸಿದ್ಧಪಡಿಸಿಕೊಂಡು ಎಸ್. ಎಸ್. ಎಲ್. ಸಿ ಪಬ್ಲಿಕ್ ಪರೀಕ್ಷೆಗೆ ಅಣಿಯಾಗ ಬೇಕಾಗುತ್ತದೆ.
- ವಿದ್ಯಾರ್ಥಿಗಳು ಸಮಗ್ರ ಅಧ್ಯಯನ ಮಾಡುವುದಕ್ಕೆ ಪೂರಕವಾಗಿ ಪಠ್ಯ ವಸ್ತುವಿಗೆ ಅನುಗುಣವಾಗಿ ಪ್ರಶ್ನೆಗಳ ಸ್ವರೂಪವನ್ನು ಬದಲಾಯಿಸಿಕೊಳ್ಳಲು ಅವಕಾಶವಿರುತ್ತದೆ.
- ಒಟ್ಟಾರೆಯಾಗಿ ಸಮಗ್ರವಾಗಿ ಕಲಿಸುವುದು ಮತ್ತು ಕಲಿಯುವುದನ್ನು ಪ್ರೋತ್ಸಾಹಿಸಿದೆ.
- ಪಠ್ಯ ಪುಸ್ತಕದಲ್ಲಿ ಇರುವ ವ್ಯಾಕರಣಾಂಶಗಳಲ್ಲಿ ಈ ಕೆಳಕಾಣುವ ಅಂಶಗಳನ್ನು ಆಧರಿಸಿ ವಸ್ತುನಿಷ್ಠ ಪ್ರಶ್ನೆಗಳನ್ನು ತಯಾರಿಸಿಕೊಳ್ಳುವುದು. ವಿದ್ಯಾರ್ಥಿಗಳಲ್ಲಿ ತಾರ್ಕಿಕ ಆಲೋಚನಾ

ಮನೋಭಾವನೆಯನ್ನು ಬೆಳೆಸುವ ದೃಷ್ಟಿಯಿಂದ ಪಠ್ಯ ಪುಸ್ತಕದ ಅಭ್ಯಾಸದ ಪ್ರಶ್ನೆಗಳನ್ನು ಹೊರತುಪಡಿಸಿಯೂ ಪಠ್ಯ ವಸ್ತುವಿಗೆ ಸಂಬಂಧಿಸಿದಂತೆ ಬೇರೆ ಪ್ರಶ್ನೆಗಳನ್ನು ಕೊಡಲು ಅವಕಾಶವಿರುವುದರಿಂದ ವಿದ್ಯಾರ್ಥಿಗಳು ಸೂಕ್ತರೀತಿಯಲ್ಲಿ ಅಭ್ಯಾಸ ಮಾಡುವುದು.

**ಪಠ್ಯ ಪುಸ್ತಕದಲ್ಲಿರುವ ವ್ಯಾಕರಣಾಂಶಗಳು**

1. ಕನ್ನಡ ಅಕ್ಷರಮಾಲೆ, ಗುಣಿತಾಕ್ಷರ, ಸಂಯುಕ್ತಾಕ್ಷರ ಇವುಗಳಲ್ಲಿ ಯಾವುದಾದರೂ ಒಂದು
2. ನಾಮಪದಗಳು
3. ಸರ್ವನಾಮ
4. ಕ್ರಿಯಾಪದಗಳು
5. ಲಿಂಗಗಳು ಅಥವಾ ವಚನಗಳು
6. ವಿಭಕ್ತಿ ಪ್ರತ್ಯಯಗಳು
7. ಕನ್ನಡ ಸಂಧಿಗಳು ಅಥವಾ ಸಂಸ್ಕೃತ ಸಂಧಿಗಳು,
8. ಸಮಾಸಗಳು
9. ವಾಕ್ಯಗಳ ವಿಧಗಳು
10. ಲೇಖನ ಚಿಹ್ನೆಗಳು
11. ಅನ್ಯದೇಶೀಯ ಪದಗಳು ಅಥವಾ ಗ್ರಾಂಥಿಕರೂಪ
12. ವಿರುದ್ಧಪದ, ಸಮಾನಾರ್ಥಕಪದ, ನಾನಾರ್ಥಪದ ಇವುಗಳಲ್ಲಿ ಯಾವುದಾದರೂ ಒಂದು
13. ಅನುಕರಣಾವ್ಯಯ ಅಥವಾ ದ್ವಿರುಕ್ತಿ
14. ನುಡಿಗಟ್ಟು ಅಥವಾ ಜೋಡುನುಡಿ
15. ತತ್ಸಮ–ತದ್ಭವ
16. ಅಲಂಕಾರ ಅಥವಾ ಛಂದಸ್ಸು

**ಮೇಲಿನ ಹದಿನಾರರಲ್ಲಿ ಯಾವುದಾದರೂ ಹತ್ತನ್ನು ಕೊಡಲು ಅವಕಾಶವಿರುತ್ತದೆ.**

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

# ಮಲ್ಲೇಶ್ವರಂ, ಬೆಂಗಳೂರು – 3

## 2019-20 ನೇ ಸಾಲಿನ ಪುನರ್ ಪರಿಷ್ಕೃತ ಪಠ್ಯಾಧಾರಿತ

## ಎಸ್.ಎಸ್.ಎಲ್.ಸಿ. ಪರೀಕ್ಷೆ

### ಅಪೇಕ್ಷಿತ ಬದಲಾವಣೆಗೆಯನ್ನು ಆಧರಿಸಿ ಪ್ರಶ್ನೆ ಪತ್ರಿಕೆಯ ವಿನ್ಯಾಸ

## CCE - PF

## [ಖಾಸಗಿ ಅಭ್ಯರ್ಥಿಗಳಿಗಾಗಿ]

## ವಿಷಯ : ತೃತೀಯ ಭಾಷೆ ಕನ್ನಡ (62K)

**ಗರಿಷ್ಠ ಅಂಕಗಳು : 100** **ಅವಧಿ : 2 ಗಂಟೆ45ನಿಮಿಷಗಳು**

1. ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

| ಉದ್ದಿಷ್ಟಗಳು | ಪ್ರತಿಶತ ಅಂಕಗಳು | ದತ್ತ ಅಂಕಗಳು |
|---|---|---|
| ಸ್ಮರಣೆ | 20 | 20 |
| ಗ್ರಹಿಕೆ | 32 | 32 |
| ಅಭಿವ್ಯಕ್ತಿ | 45 | 45 |
| ಪ್ರಶಂಸೆ | 03 | 03 |
| ಒಟ್ಟು | 100 | 100 |

2. ವಿಷಯಾನುಸಾರ ಪ್ರಾಮುಖ್ಯತೆ :

| ವಿಷಯ/ ಉಪಘಟಕ | ಪ್ರತಿಶತಅಂಕಗಳು | ದತ್ತ ಅಂಕಗಳು |
|---|---|---|
| ಗದ್ಯ | 34 | 34 |
| ಪದ್ಯ | 32 | 32 |
| ಪಠ್ಯ ಪೋಷಕ ಅಧ್ಯಯನ | 06 | 06 |
| ವ್ಯಾಕರಣ & ವಾಕ್ಯ ರಚನೆ | 28 | 28 |
| ಒಟ್ಟು | 100 | 100 |

## 3. ಪ್ರಶ್ನಾನುಸಾರ ಪ್ರಾಮುಖ್ಯತೆ :

| ಪ್ರಶ್ನೆಗಳ ವಿಧಗಳು | ದತ್ತ ಅಂಕಗಳು | ಪ್ರಶ್ನೆಗಳ ಸಂಖ್ಯೆ | ನಿಗದಿತ ಸಮಯ |
|---|---|---|---|
| ವಸ್ತುನಿಷ್ಠ & ಸಂಬಂಧೀಕರಿಸಿ | 15 | 15 | 15 ನಿ. |
| ಕಿರು ಉತ್ತರಗಳು (1) | 05 | 05 | 10 ನಿ. |
| ಕಿರು ಉತ್ತರಗಳು (2) | 20 | 10 | 35 ನಿ. |
| ದೀರ್ಘ ಉತ್ತರಗಳು (1) | 33 | 11 | 45 ನಿ |
| ದೀರ್ಘ ಉತ್ತರಗಳು (2) | 12 | 03 | 20 ನಿ |
| ದೀರ್ಘ ಉತ್ತರಗಳು (3) | 15 | 03 | 25 ನಿ |
| **ಒಟ್ಟು** | **100** | **47** | **150+15 ನಿಮಿಷಗಳು** |

## 4. ಕಠಿಣತೆಯ ಮಟ್ಟ :

| ಸುಲಭ | ಸಾಧಾರಣ | ಕಠಿಣ | ಒಟ್ಟು |
|---|---|---|---|
| **30% (30)** | **50% (50)** | **20% (20)** | **100% (100)** |

## 5. ಪ್ರಶ್ನೆಗಳ ಸ್ವರೂಪ ಮತ್ತು ಅಂಕ ವಿತರಣೆ :

| ಪ್ರಶ್ನೆಗಳ ಸ್ವರೂಪ | ಪ್ರಶ್ನೆಗಳು | ಅಂಕಗಳು |
|---|---|---|
| ವಸ್ತುನಿಷ್ಠ (ಬಹು ಆಯ್ಕೆ & ಸಂಬಂಧೀಕರಿಸಿ) ಪ್ರಶ್ನೆಗಳು | 01 ಅಂಕದ 15 ಪ್ರಶ್ನೆಗಳು | 01 X 15 = 15 |
| ಒಂದು ವಾಕ್ಯದಲ್ಲಿ ಉತ್ತರಿಸುವುದು | 01 ಅಂಕದ 05 ಪ್ರಶ್ನೆಗಳು | 01 X 05 = 05 |
| 3–4 ವಾಕ್ಯಗಳಲ್ಲಿ ಉತ್ತರಿಸುವುದು | 02 ಅಂಕಗಳ 10 ಪ್ರಶ್ನೆಗಳು | 02 X 10 = 20 |
| 5–6 ವಾಕ್ಯಗಳಲ್ಲಿ ಉತ್ತರಿಸುವುದು | 03 ಅಂಕಗಳ 11 ಪ್ರಶ್ನೆಗಳು | 03 X 11 = 33 |
| 8–10 ವಾಕ್ಯಗಳಲ್ಲಿ ಉತ್ತರಿಸುವುದು & ಪ್ರಬಂಧ ವಿವರವಾಗಿ ಉತ್ತರಿಸುವುದು | 04 ಅಂಕಗಳ 03 ಪ್ರಶ್ನೆಗಳು | 04 X 03 = 12 |
| ಪತ್ರ ಲೇಖನ | 05 ಅಂಕಗಳ 03 ಪ್ರಶ್ನೆಗಳು | 05 X 03 = 15 |
| **ಒಟ್ಟು** | **47 ಪ್ರಶ್ನೆಗಳು** | **100 ಅಂಕಗಳು** |

## 6. ಪ್ರಶ್ನೆ ಪತ್ರಿಕೆ ಅಂಕ ವಿತರಣೆ

**ಗದ್ಯ : 34**

**ಪದ್ಯ : 32**

**ಪಠ್ಯ ಪೋಷಕ ಅಧ್ಯಯನ : 06**

**ವ್ಯಾಕರಣ, ಗಾದೆ, ಅಪಠಿತ ಗದ್ಯ ಮತ್ತು ವಾಕ್ಯರಚನೆ : 28**

**ಒಟ್ಟು : 100**

**ಅವಧಿ : 2 ಗಂಟೆ 45ನಿಮಿಷಗಳು**

| ಪ್ರಶ್ನೆಗಳ ಸ್ವರೂಪ | ಗದ್ಯ | ಪದ್ಯ | ಪೋಷಕ ಅಧ್ಯಯನ | ವ್ಯಾಕರಣ | ವಾಕ್ಯರಚನೆ & ಅಪಠಿತಗದ್ಯ | ಒಟ್ಟು |
|---|---|---|---|---|---|---|
| 1. ಬಹು ಆಯ್ಕೆ & 2. ಸಂಬಂಧೀಕರಿಸಿ | 03 | 02 | – | 10 | – | **15** |
| 3. ಒಂದು ವಾಕ್ಯದ ಉತ್ತರಗಳು | 02 | 01 | 2 | – | – | **05** |
| 4. ಮೂರು ನಾಲ್ಕು ವಾಕ್ಯಗಳ ಉತ್ತರಗಳು | 10 | 06 | 04 | – | – | **20** |
| 5. ಸಂದರ್ಭಗಳು | 06 | 06 | – | – | – | **12** |
| 6. ಐದಾರು ವಾಕ್ಯಗಳ ಉತ್ತರಗಳು | 06 | 06 | – | – | – | **12** |
| 7. ಕವಿ ಕೃತಿ ವಿಚಾರ | 03 | 03 | – | – | – | **06** |
| 8. ಗಾದೆಗಳು | – | – | – | – | 03 | **03** |
| 9. ಎಂಟು/ಹತ್ತು ವಾಕ್ಯಗಳ ಉತ್ತರಗಳು | – | 04 | – | – | – | **04** |
| 10. ಕಂಠಪಾಠ | – | 04 | – | – | – | **04** |
| 11.ಸಾರಾಂಶ | 04 | – | – | – | – | **04** |
| 12. ಅಪಠಿತ ಗದ್ಯ | – | – | – | – | 05 | **05** |
| 13. ಪ್ರಬಂಧ | – | – | – | – | 05 | **05** |
| 14. ಪತ್ರ | | | | | 05 | **05** |
| **ಒಟ್ಟು** | **34** | **32** | **06** | **10** | **18** | **100** |

# ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ
# 2019–20ನೆಯ ಸಾಲಿನ ಮಾದರಿ ಪ್ರಶ್ನೆ ಪತ್ರಿಕೆ–01

**ವಿಷಯ: ತೃತೀಯ ಭಾಷೆ ಕನ್ನಡ** | **ವಿಷಯ ಸಂಕೇತ: 62K**

**ಅವಧಿ : 2–30 ಗಂಟೆಗಳು** | **ಗರಿಷ್ಠ ಅಂಕಗಳು : 80**

[ಶಾಲಾ ಅಭ್ಯರ್ಥಿಗಳಿಗಾಗಿ]

**ಸೂಚನೆಗಳು :**

- ಉತ್ತರಗಳು ನೇರವೂ, ಸ್ಪಷ್ಟವೂ ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.
- ವಸ್ತುನಿಷ್ಠ ಪ್ರಶ್ನೆಗಳಿಗೆ, ಹೊಡೆದು, ಅಳಿಸಿ, ಕೆರೆದು ಬರೆದ ಉತ್ತರಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.
- ಪೆನ್ಸಿಲ್ ಬಳಸಿ ಬರೆದ ಉತ್ತರಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **08X1=08**

1. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ವ್ಯಂಜನಾಕ್ಷರಗಳು:

(ಎ) 13 (ಬಿ) 25

(ಸಿ) 34 (ಡಿ) 49

2. ಕಟ್ಟಿತೇವ ಪದದ ಗ್ರಾಂಥಿಕ ರೂಪ:

(ಎ) ಕಟ್ಟಿದ್ದೇವೆ (ಬಿ) ಕಟ್ಟುತ್ತೇವೆ

(ಸಿ) ಕಟ್ಟಲಿದ್ದೇವೆ (ಡಿ) ಕಟತೇವೆ

3. ವ್ಯವಹಾರದ ಉಪಯೋಗಕ್ಕೆ ಇಟ್ಟುಕೊಂಡ ಹೆಸರುಗಳು:

(ಎ) ಅಂಕಿತನಾಮ (ಬಿ) ರೂಢನಾಮ

(ಸಿ) ಅನ್ವರ್ಥನಾಮ (ಡಿ) ಭಾವನಾಮ

1. ರಮೇಶನು ಶಾಲೆಯಲ್ಲಿ ಪುಸ್ತಕವನ್ನು ತೆಗೆದುಕೊಂಡು ಪೆನ್ನಿನಿಂದ ಬರೆದನು. – ಈ ವಾಕ್ಯದಲ್ಲಿ ತೃತೀಯಾ ವಿಭಕ್ತಿ ಪ್ರತ್ಯಯದಿಂದ ಕೂಡಿದ ಪದ:

(ಎ) ರಮೇಶನು (ಬಿ) ಪೆನ್ನಿನಿಂದ

(ಸಿ) ಪುಸ್ತಕವನ್ನು (ಡಿ) ಶಾಲೆಯಲ್ಲಿ

4. ಕೆಳಗಿನ ವಾಕ್ಯಗಳಲ್ಲಿ ಸಾಮಾನ್ಯ ವಾಕ್ಯ:

(ಎ) ಮಕ್ಕಳು ಶಾಲೆಗೆ ಹೋಗುತ್ತಾರೆ

(ಬಿ) ಮಕ್ಕಳು ಆಡುತ್ತಾರೆ ಆದರೆ ಆಡಲು ಸ್ಥಳವಿಲ್ಲ.

(ಸಿ) ಕಥೆಪುಸ್ತಕಗಳನ್ನು ಶಾಲೆಗೆ ತರುವರೆಂದು ತಿಳಿದು ಮಕ್ಕಳು ಕುಣಿದಾಡಿದರು.

(ಡಿ) ಶಿಶುಗೀತೆಗಳನ್ನು ಹಾಡಿ ಮಕ್ಕಳು ನಲಿದಾಡಿದರು.

5. ಕೆಳಗಿನ ಪದಗಳಲ್ಲಿ ಸವರ್ಣದೀರ್ಘ ಸಂಧಿಗೆ ಉದಾಹರಣೆ:

(ಎ) ಜೀವವೊಂದು (ಬಿ) ಸದ್ಗುರು

(ಸಿ) ಬಾಷ್ಪಾಂಜಲಿ (ಡಿ) ದೇವೋನ್ಮಾದ

6. ಕಾಮನಬಿಲ್ಲು ಮೋಡದನಾಡಿಗೆ ತೋರಣದಂತೆ ಕಾಣುತ್ತಿತ್ತು. – ಈ ವಾಕ್ಯದಲ್ಲಿರುವ ಉಪಮೇಯ:

(ಎ) ಕಾಮನಬಿಲ್ಲು (ಬಿ) ಮೋಡದನಾಡಿಗೆ

(ಸಿ) ತೋರಣದಂತೆ (ಡಿ) ಕಾಣುತ್ತಿತ್ತು

7. ಬಿಟ್ಟೂ ಬಿಡದೆ ಪಟಪಟನೆ ಸುರಿಯುವ ಮಳೆಯಲ್ಲಿ ಮಕ್ಕಳು ಹಿಂದೆ ಮುಂದೆ ನೋಡದೆ ಆಡಿದರು: ಈ ವಾಕ್ಯದಲ್ಲಿರುವ ಅನುಕರಣಾವ್ಯಯ ಪದ:

(ಎ) ಬಿಟ್ಟೂ ಬಿಡದೆ (ಬಿ)ಸುರಿಯುವ ಮಳೆ

(ಸಿ) ಹಿಂದೆ ಮುಂದೆ (ಡಿ) ಪಟಪಟನೆ

**II. ಕೆಳಗಿನ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **04X1=04**

8. ಕುಲಕರ್ಣಿ : ಭಾರತೀಯ ಅಧಿಕಾರಿ : : ಸೋಮಣ್ಣ : ––––

9. ಕೆಳದಿ : ಚೆನ್ನಮ್ಮ : : ಬೆಳವಡಿ : ––––

10. ಆಚಾರ : ಸ್ವರ್ಗ : : ಅನಾಚಾರ : ––––

11. ಜಾತಿ, ಭೀತಿ ಇಲ್ಲದ : ಬಾಳ ಕಟ್ಟತೇವೆ : : ಗೋಳು, ಗುಂಡು ಇಲ್ಲದ : ––––

**III. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **04X01=04**

12. ಗೊರೂರು ಯಾವ ಊರಿನಲ್ಲಿ ದಾರಿತಪ್ಪಿಸಿ ಕೊಂಡರು?

13. ಗೋಡೆಗೆ ಕಪ್ಪು ಬಳಿದಹಾಗೆ ರೈತರಿಗೆ ಕಂಡಿದ್ದು ಯಾವುದು?

14. ಈರಪ್ಪ. ಎಂ. ಕಂಬಳಿಯವರಿಗೆ ವಾಲಾಡುತ್ತಾ ಹೊರಟ ಬಸ್ಸು ಯಾವುದರಂತೆ ಕಂಡಿತು?

15. ಪುಲಿಗೆರೆ ಸೋಮನಾಥನು ಹೇಳಿರುವಂತೆ ಋಷಿಗಳಿಗೆ ಯಾವ ಗುಣವಿರಬೇಕು?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **08X02=16**

16. ಗಾಂಧೀಜಿಯವರು ಕೊಡಗಿನಲ್ಲಿ ತಂಗಿದ್ದ ಸಂದರ್ಭದಲ್ಲಿ ನಡೆದ ಸಂಗತಿಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

17. ಶರೀಫರು ಮಗಳು ಮತ್ತು ಹೆಂಡತಿಯ ಮರಣದ ದುಃಖದಿಂದ ಹೇಗೆ ಹೊರಬಂದರು?

18. ಆದ್ಯ ರಂಗಾಚಾರ್ಯರ ತಂದುಕೊಟ್ಟ ಪುಸ್ತಕಗಳು ಬೀಚಿಯವರ ಮೇಲೆ ಅತ್ಯಂತ ಪ್ರಭಾವ ಬೀರಿತೇಕೆ?

19. ಬೀಚಿಯವರು ಸಂಧ್ಯಾರಾಗ ಪುಸ್ತಕವನ್ನು ಓದಿದ ಸಂದರ್ಭವನ್ನು ಕುರಿತು ಬರೆಯಿರಿ.

20. ಸಿ.ಪಿ.ಕೆಯವರು ತಮ್ಮ ಅಹಂಕಾರವು ಗ್ರಂಥಾಲಯದಲ್ಲಿ ಮುದುಡಿ ಹೋಗುವುದೆಂದು ಏಕೆ ಹೇಳಿದ್ದಾರೆ?

21. ಸಿ.ಪಿ.ಕೆಯವರು ಭೀತ ವಿಸ್ಮಿತರಾಗಿ ತತ್ತರಿಸಿದ ಸನ್ನಿವೇಶವನ್ನು ಕುರಿತು ಬರೆಯಿರಿ.

22. ನದಿಯ ದಟದಲ್ಲಿದ್ದವರಿಗೆ ಆಶ್ಚರ್ಯವುಂಟಾಗುವ ಸನ್ನಿವೇಶವನ್ನು ಪುರಂದರದಾಸರು ಹೇಗೆ ವರ್ಣಿಸಿದ್ದಾರೆ?

23. ಧರ್ಮಪದನಿಗೆ ರೊಟ್ಟಿಕೊಟ್ಟವನ ಕತ್ತಿನ ಪಟ್ಟಿಯನ್ನು ಹಿಡಿದು ಮಾತಾಡಿಸಬೇಕು ಎನಿಸಿತೇಕೆ?

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ.** **02X03=06**

24. "ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರು"

25. "ಬೆಟ್ಟದ ಮೇಲೆ ಜಗ್ಗಿಸಿ ಹುಯ್ಯೋ ಮಳೆರಾಯ"

**VI. ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **04X03=12**

26. ಶರೀಫರ ತತ್ವಪದಗಳ ವೈಶಿಷ್ಟ್ಯವನ್ನು ವಿವರಿಸಿರಿ?

27. ಶಿವಾಜಿಯು "ದೇವಿ ನನ್ನ ಅಪರಾಧವನ್ನು ಕ್ಷಮಿಸು" ಎಂದು ಮಲ್ಲಮ್ಮಾಜಿಯನ್ನು ಕೇಳಿಕೊಂಡಿದ್ದೇಕೆ?

28. ಮನುಷ್ಯನು ದೈವ ಕೃಪೆಗೆ ಪಾತ್ರರಾಗಲು ಬಸವಣ್ಣನವರು ತೋರಿಸಿರುವ ಮಾರ್ಗವು ಪ್ರಶಂಸನೀಯವಾದುದು ಹೇಗೆ? ವಿವರಿಸಿರಿ.

29. ಪುರಂದರದಾಸರು ಡಾಂಭಿಕನ ಭಕ್ತಿಯನ್ನು ಹೇಗೆ ವರ್ಣಿಸಿದ್ದಾರೆ? ನಿಮ್ಮ ಮಾತುಗಳಲ್ಲಿ ಬರೆಯಿರಿ.

**VII. ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ, ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **02X03=06**

30. ರಾಮಸ್ವಾಮಿ ಅಯ್ಯಂಗಾರ್

31. ಸತೀಶ್ ಕುಲಕರ್ಣಿ

**VIII. ಕೆಳಗಿನ ಗಾದೆಯನ್ನು ವಿಸ್ತರಿಸಿ ಬರೆಯಿರಿ.** **01X03=03**

32. ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ

**ಅಥವಾ**

ಉಪ್ಪು ತಿಂದವನು ನೀರುಕುಡಿಯಲೇ ಬೇಕು

**IX. ಕೆಳಗಿನ ಪ್ರಶ್ನೆಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **01X04=04**

33. ರಾಮಸಿಂಗನ ದೇಶಾಭಿಮಾನವನ್ನು ನಿಮ್ಮ ಮಾತುಗಳಲ್ಲಿ ವರ್ಣಿಸಿರಿ.

**ಅಥವಾ**

ರಾಮಸಿಂಗನ ಮೇಲೆ ಗುಂಡು ಹಾರಿಸಿದುದನ್ನು ಸೋಮಣ್ಣನು ಹೇಗೆ ವಿರೋಧಿಸಿದನು? ವಿವರಿಸಿರಿ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **01X04=04**

34. ನಾವು ---------- ಇವರು

------------------

ಭೂಮಿ ---------------

--------------- ಇಂದೆ

**ಅಥವಾ**

ಆಂಗ್ಲ ---------------

ಹರಿವ---------------

------ರಾಗಿ----------

--------------- ಒಂದೆ

**XI. ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 01X04=04**

ಹಬ್ಬಗಳೆಂದರೆ ಸಡಗರ, ಸಂತಸ, ಸಮೃದ್ಧಿ. ಭಾರತೀಯ ಸಂಸ್ಕೃತಿಯಲ್ಲಿ ಹಬ್ಬಗಳು ತುಂಬ ಮಹತ್ವದ ಸ್ಥಾನ ಪಡೆದಿವೆ. ಅವು ನಮ್ಮ ಧಾರ್ಮಿಕ ಶ್ರದ್ಧೆಯ ಸಂಕೇತವಾಗಿ ಶತಮಾನಗಳಿಂದಲೂ ಉಳಿದುಕೊಂಡು ಬಂದಿವೆ. ಹಬ್ಬಗಳಿಗೆ ನಂಬಿಕೆ ಹಾಗೂ ಆಚರಣೆ ಎಂಬ ಎರಡು ಮುಖಗಳಿದ್ದು, ಅವು ಪರಸ್ಪರ ಪೂರಕ ಅಂಶಗಳಾಗಿವೆ. ನಂಬಿಕೆ ದೃಢವಾಗಿದ್ದರೆ ಮಾತ್ರ ಆಚರಣೆ ಫಲಪ್ರದವಾಗಲು ಸಾಧ್ಯ. ಇಂಥ ನಂಬಿಕೆಯುಳ್ಳ ಭಾರತೀಯರು ಅನೇಕ ಹಬ್ಬಗಳನ್ನು ಆಚರಿಸಿಕೊಂಡು ಬಂದಿದ್ದಾರೆ. ಭಾರತೀಯ ಹಬ್ಬಗಳು ಪ್ರಕೃತಿಯೊಡನೆ ನಿಕಟ ಸಂಬಂಧವನ್ನು ಹೊಂದಿರುವುದರಿಂದ ಪ್ರಕೃತಿಯ ರಕ್ಷಣೆಗೆ ಪ್ರೋತ್ಸಾಹವನ್ನು ನೀಡುತ್ತವೆ. ಜೊತೆಗೆ ಸೌಹಾರ್ದ ಮನೋಭಾವವನ್ನು ಬೆಳೆಸಿ, ಬದುಕಿನಲ್ಲಿ ಸಾಮರಸ್ಯವನ್ನು ಮೂಡಿಸುತ್ತವೆ.

35. **ಪ್ರಶ್ನೆಗಳು :**

1. ಆಚರಣೆಯು ಯಾವಾಗ ಫಲಪ್ರದವಾಗುವುದು?
2. ಭಾರತೀಯ ಹಬ್ಬಗಳು ಯಾವುದರ ಸಂಕೇತವಾಗಿವೆ?
3. ಭಾರತೀಯ ಹಬ್ಬಗಳ ಮಹತ್ವವೇನು?
4. ಹಬ್ಬಗಳು ಪ್ರಕೃತಿಯ ಉಳಿವಿಗೆ ಹೇಗೆ ಸಹಾಯಕವಾಗಿವೆ?

**XII. ಕೆಳಗಿನ ವಿಷಯವನ್ನು ಕುರಿತು ಹತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ. 01X04=04**

36. ವಿದ್ಯಾರ್ಥಿಗಳ ಜೀವನದಲ್ಲಿ ಪರೀಕ್ಷೆಗಳ ಪಾತ್ರ

**ಅಥವಾ**

ರಾಷ್ಟ್ರೀಯ ಸ್ಮಾರಕಗಳ ಸಂರಕ್ಷಣೆ

**XIII. ಕೆಳಗಿನ ಸೂಚನೆಗೆ ಅನುಗುಣವಾಗಿ ಪತ್ರವನ್ನು ಬರೆಯಿರಿ. 01X05=05**

37. ನಿಮ್ಮನ್ನು ಆದರ್ಶ ಪ್ರೌಢಶಾಲೆಯಲ್ಲಿ ಓದುತ್ತಿರುವ ತೇಜು ಎಂದು ಭಾವಿಸಿಕೊಂಡು ಉಡುಪಿಯಲ್ಲಿರುವ ನಿಮ್ಮ ತಂದೆಯವರಿಗೆ ಶಾಲಾ ಪ್ರವಾಸದ ಸಲುವಾಗಿ ಹಣಕಳಿಸುವಂತೆ ಕೋರಿ ಒಂದು ಪತ್ರ ಬರೆಯಿರಿ.

**ಅಥವಾ**

ಬಾಗಲಕೋಟೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ನಿಮ್ಮನ್ನು ಶಶಿಕಿರಣ ಎಂದು ಭಾವಿಸಿಕೊಂಡು, ಸೂಕ್ತ ಕಾರಣವನ್ನು ತಿಳಿಸಿ, ವರ್ಗವಣಾ ಪತ್ರವನ್ನು ಕೊಡುವಂತೆ ಕೋರಿ ನಿಮ್ಮ ಮುಖ್ಯೋಪಾಧ್ಯಾಯರಿಗೆ ಒಂದು ಪತ್ರವನ್ನು ಬರೆಯಿರಿ.

***************************

# ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ
# 2019–20ನೆಯ ಸಾಲಿನ ಮಾದರಿ ಪ್ರಶ್ನೆ ಪತ್ರಿಕೆ–02

**ವಿಷಯ: ತೃತೀಯ ಭಾಷೆ ಕನ್ನಡ** **ವಿಷಯ ಸಂಕೇತ: 62K**

**ಅವಧಿ : 2–30 ಗಂಟೆಗಳು** **ಗರಿಷ್ಠ ಅಂಕಗಳು : 80**

[ಶಾಲಾ ಅಭ್ಯರ್ಥಿಗಳಿಗಾಗಿ]

**ಸೂಚನೆಗಳು :**

- ಉತ್ತರಗಳು ನೇರವೂ, ಸ್ಪಷ್ಟವೂ ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.
- ವಸ್ತುನಿಷ್ಠ ಪ್ರಶ್ನೆಗಳಿಗೆ, ಹೊಡೆದು, ಅಳಿಸಿ, ಕೆರೆದು ಬರೆದ ಉತ್ತರಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.
- ಪೆನ್ಸಿಲ್ ಬಳಸಿ ಬರೆದ ಉತ್ತರಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 08X1=08**

1) ಕೊಡಗಿನ ಗೌರಮ್ಮನವರ ತಂದೆಯ ಹೆಸರು:

(ಎ) ಎನ್.ಎಸ್. ರಾಮಯ್ಯ (ಬಿ) ಜಿ. ಎಂ. ಮಂಜುನಾಥಯ್ಯ

(ಸಿ) ಬಿ.ಟಿ. ಗೋಪಾಲಕೃಷ್ಣಯ್ಯ (ಡಿ) ಮಾಸ್ತಿ ವೆಂಕಟೇಶ ಅಯ್ಯಂಗಾರ್

2) ಸತೀಶ ಕುಲಕರ್ಣಿಯವರು ಕಟ್ಟಬಯಸಿರುವ ಮನುಕುಲ:

(ಎ) ಕುಲವೆನ್ನುವ ಮನುಕುಲ (ಬಿ) ಕುಲವೆನ್ನದ ಮನುಕುಲ

(ಸಿ) ಕುಲದಂತಿರುವ ಮನುಕುಲ (ಡಿ) ಕುಲೀನ ಮನುಕುಲ

3) ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳು:

(ಎ) ಕಚಟತಪ (ಬಿ) ಗಜಡದಬ

(ಸಿ) ಖಝಥಥಫ (ಡಿ) ಙಞಣನಮ

4) 'ತುಳಿಯುತೇವೆ' ಪದದ ಗ್ರಾಂಥಿಕರೂಪ:

(ಎ) ತುಳಿಯುವುದಿಲ್ಲ (ಬಿ) ತುಳಿಯದ ಹಾಗೆ

(ಸಿ) ತುಳಿಯುತ್ತೇವೆ (ಡಿ) ತುಳಿಯುವಂತೆ

5) ಮಳೆಯ ನೀರಿನಲ್ಲಿ ಮೊಸಳೆಗಳು <u>ಸರಸರನೆ</u> ಹರಿದಾಡಿದವು–ಗೆರೆ ಎಳೆದ ಪದವು:

(ಎ) ಜೋಡುನುಡಿ (ಬಿ) ದ್ವಿರುಕ್ತಿ

(ಸಿ) ನುಡಿಗಟ್ಟು (ಡಿ) ಅನುಕರಣಾವ್ಯಯ

6) ಭಾವಸೂಚಕ ಲೇಖನ ಚಿಹ್ನೆಯನ್ನು ಬಳಸ ಬೇಕಾಗಿರುವ ವಾಕ್ಯ:

(ಎ) ಅವರ ದೇಶ ಯಾವುದು (ಬಿ) ಅಯ್ಯೋ ದೇವರೆ ಹೀಗಾಗ ಬಾರದಿತ್ತು

(ಸಿ) ಡಂಗುರ ಸಾರಿದ್ದನ್ನು ಕೇಳಿಲ್ಲವೇ (ಡಿ) ಗೌರಿಯ ಮುಖ ಕಮಲದಂತಿದೆ

7) ಸೂರ್ಯೋದಯವಾದೊಡನೆಯೇ ಪ್ರತಿಯೊಂದು ದೇವಾಲಯದಲ್ಲೂ ಹವನಹೋಮಾದಿಗಳು ನೆರವೇರಿದವು.–ಈ ವಾಕ್ಯದಲ್ಲಿರುವ ಗುಣಸಂಧಿ ಪದ:

(ಎ) ಸೂರ್ಯೋದಯ (ಬಿ) ಪ್ರತಿಯೊಂದು

(ಸಿ) ದೇವಾಲಯ (ಡಿ) ಹವನಹೋಮಾದಿಗಳು

8) ಬಿಸಿಲು ಬಂತು ನೆರಳು ಬಂತು ಗಾಳಿ ಬಿಚ್ಚಿ ಬೀಸಿತು

ಒಮ್ಮೆ ಹಸಿರು ಒಮ್ಮೆ ಹೊನ್ನು ಹಚ್ಚಡವನು ಹಾಸಿತು : ಈ ಪದ್ಯದಲ್ಲಿರುವ ಅಂತ್ಯಪ್ರಾಸ:

(ಎ) ಬಿಸಿಲು–ನೆರಳು (ಬಿ) ಬೀಸಿತು–ಹಾಸಿತು

(ಸಿ) ಹಸಿರು–ಹೊನ್ನು (ಡಿ) ಒಮ್ಮೆ–ಒಮ್ಮೆ

**II. ಕೆಳಗಿನ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **04X1=04**

9) ಹಳಗನ್ನಡ : ಕರ್ಮಧಾರೆಯ ಸಮಾಸ : : ಕಸಕಡ್ಡಿ :-----

10) ದಿಟ್ಟಿ : ದೃಷ್ಟಿ : : ಅಚ್ಚರಿ : -----

11) ಹಿರಿಬಾಳುಗಳ ಮಸ್ತಕಾವಲೋಕನಕ್ಕೆ ತತ್ತರಿಸಿದ್ದು:ಸಿ.ಪಿ.ಕೆ: :ವಿಶ್ವರೂಪಾವಲೋಕಕ್ಕೆ ತತ್ತರಿಸಿದ್ದು : -----

12) ಗುಂಡಪ್ಪನವರ ತಿಮ್ಮ : ಸೂರ್ಯ : : ಬೀಚಿಯವರ ತಿಂಮ : -----

**III. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **04X01=04**

13) ಉಲ್ಲಾಳವನ್ನು ಆಳಿದ ಪ್ರಸಿದ್ಧರಾಣಿ ಯಾರು?

14) ಉದರ ವೈರಾಗ್ಯವೆಂದರೇನು?

15) ಈರಪ್ಪ ಎಂ ಕಂಬಳಿಯವರು ಯಾವ ಊರಿಗೆ ಹೊರಟ್ಟಿದ್ದರು?

16) ಧರ್ಮಪದನ ತಾಯಿಯ ಹೆಸರೇನು?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **08X02=16**

17) ಟ್ರಾಫಿಕ್ ಪೊಲೀಸರು ಗೊರೂರರನ್ನು ಹೇಗೆ ಉಪಚರಿಸಿದರು?

18) ಶರೀಫರ ಬಾಲ್ಯವು ಹಿಂದೂ ಪರಂಪರೆಯೊಂದಿಗೆ ಹೇಗೆ ಬೆರೆತುಹೋಗಿತ್ತು?

19) ಪೊಲೀಸರ ದೊಡ್ಡ ಪಡೆಯು ಮೋಹನಪುರಕ್ಕೆ ಏಕೆ ಬಂದಿತು?

20) ರಾಮಸಿಂಗನಿಗೂ ಶಿಪಾಯಿಗಳಿಗೂ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

21) 'ಬೆಳಕ ಸತ್ವ ಒಂದೇ' ಎನ್ನುವುದಕ್ಕೆ ನಿಸಾರ್ ಅಹಮದ್ ಅವರು ನೀಡಿರುವ ನಿದರ್ಶನಗಳಾವುವು?

22) ರೈತರು ತಮ್ಮ ಕಷ್ಟವನ್ನು ಮಳೆರಾಯನಲ್ಲಿ ಹೇಗೆ ನಿವೇದಿಸಿಕೊಂಡರು?

23) ಮೋಡಗಳು ಕಾಣಿಸಿಕೊಂಡಾಗ ರೈತನಿಗಾದ ಸಂತೋಷವನ್ನು ಜನಪದರು ಹೇಗೆ ವರ್ಣಿಸಿದ್ದಾರೆ?

24) ಸೋಮೇಶ್ವರ ಶತಕದಲ್ಲಿ ಹೇಳಿರುವಂತೆ ಯಾವಗುಣವನ್ನು ಹೊಂದಿದವರು ಯಾವ ಹೆಸರಿಗೆ ಅರ್ಹರಾಗುತ್ತಾರೆ?

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ. 02X03=06**

25) "ನಾನು ಏನು ಮಾಡಿದರೂ ಕಾನೂನು ಬಿಟ್ಟು ಹೋಗುವುದಿಲ್ಲ"

26) "ಎನಿತು ಹಿರಿಬಾಳುಗಳ ಮೇಳ ನೆರೆದಿಹುದಿಲ್ಲಿ!"

**VI. ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 04X03=12**

27) ಶರೀಫರು ಮತ್ತು ಗೋವಿಂದ ಭಟ್ಟರ ನಡುವಿನ ಸಂಬಂಧವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

28) ಬೀಚಿಯವರು ಡಿ.ವಿ.ಜಿಯವರ 'ಮಂಕುತಿಮ್ಮನ ಕಗ್ಗ'ವನ್ನು ಏಕೆ ಮೆಚ್ಚಿಕೊಂಡಿದ್ದರು?

29) 'ಕಟ್ಟತೇವ ನಾವು' ಪದ್ಯದ ಆಶಯವೇನು?

30) ಜೀವರಸ ಒಂದೇ ಎಂಬ ಭಾವನೆ ಭೂಮಿತಾಯ ಕುಡಿಗಳು ಕವನದಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿರಿ.

**VII. ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ, ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 02X03=06**

31) ಡಾ॥ ವಿಜಯಲಕ್ಷ್ಮೀ ಬಾಳೇಕುಂದ್ರಿ

32) ಪುರಂದರದಾಸರು

**VIII. ಕೆಳಗಿನ ಗಾದೆಯನ್ನು ವಿಸ್ತರಿಸಿ ಬರೆಯಿರಿ. 01X03=03**

33) ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ

**ಅಥವಾ**

ಕಣ್ಣಾರೆ ಕಂಡರೂ ಪರಾಂಬರಿಸಿ ನೋಡು

**IX. ಕೆಳಗಿನ ಪ್ರಶ್ನೆಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 01X04=04**

34) ಗಾಂಧೀಜಿಯವರು ಕೊಡಗಿನಲ್ಲಿ ತಂಗಿದ್ದಾಗ ನಡೆದ ಸಂಗತಿಗಳನ್ನು ಕುರಿತು ಬರೆಯಿರಿ.

**ಅಥವಾ**

'ಕೊಡಗಿನ ಗೌರಮ್ಮನವರು ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರು' ಈ ಹೇಳಿಕೆಯನ್ನು ಸಮರ್ಥಿಸಿರಿ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 01X04=04**

35) ಕಳಬೇಡ -------------

------------------

------------------

---------------ಶುದ್ಧಿ

**ಅಥವಾ**

ದೇವಲೋಕ ----------------

---------------------

---------------------

----------------ಪ್ರಮಾಣು

**XI. ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 01X04=04**

ಗುರುಕುಲದಲ್ಲಿ ಮಹಾಗುರುಗಳು ತಮ್ಮ ಶಿಷ್ಯರಿಗೆ ಒಂದು ಪರೀಕ್ಷೆಯನ್ನು ಏರ್ಪಡಿಸಿದರು. ಶಿಷ್ಯರು ಹೋಗುವ ದಾರಿಯಲ್ಲಿ ಗಾಜುಗಳನ್ನು ಎರಚಿ ಏನು ಮಾಡುತ್ತಾರೆಂದು ಅವರಿಗೆ ತಿಳಿಯದಂತೆ ವೀಕ್ಷಿಸಿದರು. ಮೊದಲ ಗುಂಪಿನವರು ಗಾಜುಗಳನ್ನು ದಾಟಿ ಹೋದರು. ಎರಡನೆಯ ಗುಂಪಿನವರು ಗಾಜನ್ನು ತುಳಿಯದೆ ಬಳಸಿಕೊಂಡು ಹೋದರು. ಮೂರನೆಯ ಗುಂಪಿನವರು ಗಾಜುಗಳನ್ನು ಆಯ್ದು ದಾರಿಯನ್ನು ಶುಚಿಗೊಳಿಸಿ ಮುಂದೆ ಸಾಗಿದರು. ಮೂರನೆಯ ಗುಂಪಿನವರಿಗೆ ಗುರುಗಳು ಆಶೀರ್ವಾದ ಮಾಡಿ ನೀವು ಕಲಿತದ್ದು ಮುಗಿಯಿತು ನಿಮ್ಮ ಊರಿಗೆ ತೆರಳಬಹುದೆಂದರು. ತೊಂದರೆಯನ್ನು ನಿವಾರಿಸುವ ಬುದ್ಧಿ ಬಂದರೆ ಅದು ಸದ್ವಿದ್ಯೆ. ಯಾರಿಗೆ ಏನಾದರೂ ಆಗಲಿ ನನಗೇನು ಎಂಬ ಭಾವನೆ ಬಂದರೆ ಅದು ಬರೀ ವಿದ್ಯೆ. ನಾನು ಮಾತ್ರವೇ ಚೆನ್ನಾಗಿರಬೇಕು ಎಂಬ ಭಾವನೆ ಮೂಡಿದರೆ ಅದು ದುರ್ವಿದ್ಯೆ. ವಿದ್ಯೆಯೆಂಬುದು ಬರೀ ಮನಸ್ಸಿನ ಸರಕಲ್ಲ; ಬುದ್ಧಿಯ ಸರಕಲ್ಲ; ಅದು ಅಂತಃಕರಣಕ್ಕೆ ಸಂಬಂಧಪಟ್ಟ ಸರಕು. ದಯೆ, ಕರುಣೆ, ಮರುಕ, ಅನುಕಂಪ ಇವೆಲ್ಲವೂ ಸದ್ಬುದ್ಧಿಯ ಸಂತಾನಗಳು.

**36) ಪ್ರಶ್ನೆಗಳು :**

1. ಗುರುಗಳು ಮೂರನೆಯ ಗುಂಪಿನವರಿಗೆ ಏಕೆ ಆಶೀರ್ವಾದ ಮಾಡಿದರು ?
2. ದುರ್ವಿದ್ದೆಯವರ ಮನಸ್ಸು ಯಾವರೀತಿ ಇರುತ್ತದೆ ?
3. ಸದ್ಬುದ್ಧಿಯ ಸಂತಾನಗಳು ಯಾವುವು ?
4. ಬರಿ ವಿದ್ಯೆಯೆಂದು ಯಾವುದನ್ನು ಪರಿಗಣಿಸ ಬಹುದು ?

**XII. ಕೆಳಗಿನ ವಿಷಯವನ್ನು ಕುರಿತು ಹತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ. 01X04=04**

37) ಗಣಕಯಂತ್ರ

**ಅಥವಾ**

ಪ್ರಕೃತಿವಿಕೋಪ

**XIII. ಕೆಳಗಿನ ಸೂಚನೆಗೆ ಅನುಗುಣವಾಗಿ ಪತ್ರವನ್ನು ಬರೆಯಿರಿ. 01X05=05**

**38)** ನಿಮ್ಮನ್ನು ಯಾದಗಿರಿ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ಪೂಜ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ ಸ್ವಾತಂತ್ರ್ಯ ದಿನಾಚರಣೆಯನ್ನು ಕುರಿತು ಹಾಸನದಲ್ಲಿರುವ ನಿಮ್ಮ ಗೆಳತಿಗೆ ಒಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಶಿವನಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಸಿದ್ಧಾರ್ಥನೆಂದು ಭಾವಿಸಿಕೊಂಡು, ನಿಮ್ಮ ಬಡಾವಣೆಯಲ್ಲಿ ಕೆಟ್ಟುಹೋಗಿರುವ ವಿದ್ಯುತ್ ದೀಪಗಳನ್ನು ಸರಿಪಡಿಸುವಂತೆ ಕೋರಿ ಕೆ.ಪಿ.ಟಿ.ಸಿ.ಎಲ್ ಅಧಿಕಾರಿಗಳಿಗೆ ಮನವಿಮಾಡಿಕೊಂಡು ಒಂದು ಪತ್ರವನ್ನು ಬರೆಯಿರಿ.

*******************

# ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ

# 2019–20ನೆಯ ಸಾಲಿನ ಮಾದರಿ ಪ್ರಶ್ನೆ ಪತ್ರಿಕೆ – 01

**ವಿಷಯ: ತೃತೀಯ ಭಾಷೆ ಕನ್ನಡ** **ವಿಷಯ ಸಂಕೇತ: 62K**

**ಅವಧಿ : 2 ಗಂಟೆ 45ನಿಮಿಷಗಳು** **ಗರಿಷ್ಠ ಅಂಕಗಳು : 100**

**[ಖಾಸಗಿ ಅಭ್ಯರ್ಥಿಗಳಿಗಾಗಿ]**

**ಸೂಚನೆಗಳು :**

- ಉತ್ತರಗಳು ನೇರವೂ, ಸ್ಪಷ್ಟವೂ ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.
- ವಸ್ತುನಿಷ್ಠ ಪ್ರಶ್ನೆಗಳಿಗೆ, ಹೊಡೆದು, ಅಳಿಸಿ, ಕೆರೆದು ಬರೆದ ಉತ್ತರಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.
- ಪೆನ್ಸಿಲ್ ಬಳಸಿ ಬರೆದ ಉತ್ತರಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **10X1=10**

1. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ವ್ಯಂಜನಾಕ್ಷರಗಳು

   (ಎ) 13 (ಬಿ) 25

   (ಸಿ) 34 (ಡಿ) 49

2. ಕಟ್ಟಿತೇವ ಪದದ ಗ್ರಾಂಥಿಕ ರೂಪ:

   (ಎ) ಕಟ್ಟಿದ್ದೇವೆ (ಬಿ) ಕಟ್ಟುತ್ತೇವೆ

   (ಸಿ) ಕಟ್ಟಲಿದ್ದೇವೆ (ಡಿ) ಕಟತೇವೆ

3. ವ್ಯವಹಾರದ ಉಪಯೋಗಕ್ಕೆ ಇಟ್ಟುಕೊಂಡ ಹೆಸರುಗಳು:

   (ಎ) ಅಂಕಿತನಾಮ (ಬಿ) ರೂಢನಾಮ

   (ಸಿ) ಅನ್ವರ್ಥನಾಮ (ಡಿ) ಭಾವನಾಮ

4. ರಮೇಶನು ಶಾಲೆಯಲ್ಲಿ ಪುಸ್ತಕವನ್ನು ತೆಗೆದುಕೊಂಡು ಪೆನ್ನಿನಿಂದ ಬರೆದನು. – ಈ ವಾಕ್ಯದಲ್ಲಿ ತೃತೀಯಾ ವಿಭಕ್ತಿ ಪ್ರತ್ಯಯದಿಂದ ಕೂಡಿದ ಪದ:

   (ಎ) ರಮೇಶನು (ಬಿ) ಪೆನ್ನಿನಿಂದ

   (ಸಿ) ಪುಸ್ತಕವನ್ನು (ಡಿ) ಶಾಲೆಯಲ್ಲಿ

5. ಕೆಳಗಿನ ವಾಕ್ಯಗಳಲ್ಲಿ ಸಾಮಾನ್ಯ ವಾಕ್ಯ:

   (ಎ) ಮಕ್ಕಳು ಶಾಲೆಗೆ ಹೋಗುತ್ತಾರೆ

   (ಬಿ) ಮಕ್ಕಳು ಆಡುತ್ತಾರೆ ಆದರೆ ಆಡಲು ಸ್ಥಳವಿಲ್ಲ.

   (ಸಿ) ಕಥೆಪುಸ್ತಕಗಳನ್ನು ಶಾಲೆಗೆ ತರುವರೆಂದು ತಿಳಿದು ಮಕ್ಕಳು ಕುಣಿದಾಡಿದರು.

   (ಡಿ) ಶಿಶುಗೀತೆಗಳನ್ನು ಹಾಡಿ ಮಕ್ಕಳು ನಲಿದಾಡಿದರು.

6. ಕೆಳಗಿನ ಪದಗಳಲ್ಲಿ ಸವರ್ಣದೀರ್ಘ ಸಂಧಿಗೆ ಉದಾಹರಣೆ:

(ಎ) ಜೀವವೊಂದು (ಬಿ) ಸದ್ಗುರು

(ಸಿ) ಬಾಷ್ಪಾಂಜಲಿ (ಡಿ) ದೇವೋನ್ಮಾದ

7. ಕಾಮನಬಿಲ್ಲು ಮೋಡದನಾಡಿಗೆ ತೋರಣದಂತೆ ಕಾಣುತ್ತಿತ್ತು – ಈ ವಾಕ್ಯದಲ್ಲಿರುವ ಉಪಮೇಯ:

(ಎ) ಕಾಮನಬಿಲ್ಲು (ಬಿ) ಮೋಡದನಾಡಿಗೆ

(ಸಿ) ತೋರಣದಂತೆ (ಡಿ) ಕಾಣುತ್ತಿತ್ತು

8. ಬಿಟ್ಟೂ ಬಿಡದೆ ಪಟಪಟನೆ ಸುರಿಯುವ ಮಳೆಯಲ್ಲಿ ಮಕ್ಕಳು ಹಿಂದೆ ಮುಂದೆ ನೋಡದೆ ಆಡಿದರು ಈ ವಾಕ್ಯದಲ್ಲಿರುವ ಅನುಕರಣಾವ್ಯಯ ಪದ:

(ಎ) ಬಿಟ್ಟೂ ಬಿಡದೆ (ಬಿ) ಸುರಿಯುವ ಮಳೆ

(ಸಿ) ಹಿಂದೆ ಮುಂದೆ (ಡಿ) ಪಟಪಟನೆ

9. ಕಾವ್ಯ ಪದದ ತದ್ಭವರೂಪ :

(ಎ) ಕಬ್ಬ (ಬಿ) ಕಜ್ಜ

(ಸಿ) ಕವನ (ಡಿ) ಕವಿತೆ

10.ರಾಕ್ಷಸಿ ಪದದ ಅನ್ಯಲಿಂಗ ಪದ:

(ಎ) ರಕ್ಷಕಿ (ಬಿ) ರಕ್ಕಸ

(ಸಿ) ರಾಕ್ಷಸ (ಡಿ) ರಕ್ಕಸಿ

**II. ಕೆಳಗಿನ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **05X1=05**

11. ಕುಲಕರ್ಣಿ : ಭಾರತೀಯ ಅಧಿಕಾರಿ : : ಸೋಮಣ್ಣ : ----

12. ಕೆಳದಿ : ಚೆನ್ನಮ್ಮ : : ಬೆಳವಡಿ : ----

13. ಆಚಾರ : ಸ್ವರ್ಗ : : ಅನಾಚಾರ : ----

14. ಜಾತಿ, ಭೀತಿ ಇಲ್ಲದ : ಬಾಳ ಕಟ್ಟತೇವೆ : : ಗೋಳು, ಗುಂಡು ಇಲ್ಲದ : ----

15. ಅಂದನಾ ತಿಂಮ್ಮ : ಬೀಚಿ : : ಮಂಕುತಿಮ್ಮ :

**III. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **05X1=05**

16. ಗೊರೂರು ಯಾವ ಊರಿನಲ್ಲಿ ದಾರಿತಪ್ಪಿಸಿ ಕೊಂಡರು?

17. ಗೋಡೆಗೆ ಕಪ್ಪು ಬಳಿದಹಾಗೆ ರೈತರಿಗೆ ಕಂಡಿದ್ದು ಯಾವುದು?

18. ಈರಪ್ಪ ಎಂ ಕಂಬಳಿಯವರಿಗೆ ವಾಲಾಡುತ್ತಾ ಹೊರಟ ಬಸ್ಸು ಯಾವುದರಂತೆ ಕಂಡಿತು?

19. ಮಲಿಗೆರೆ ಸೋಮನಾಥನು ಹೇಳಿರುವಂತೆ ಋಷಿಗಳಿಗೆ ಯಾವ ಗುಣವಿರಬೇಕು?

20. ಬೆಳವಡಿಯ ಅರಸು ಈಶಪ್ರಭುವನ್ನು ಗಾಯಗೊಳಿಸಿದವರು ಯಾರು?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10X02=20**

21. ಗಾಂಧೀಜಿಯವರು ಕೊಡಗಿನಲ್ಲಿ ತಂಗಿದ್ದ ಸಂದರ್ಭದಲ್ಲಿ ನಡೆದ ಸಂಗತಿಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
22. ಶರೀಫರು ಮಗಳು ಮತ್ತು ಹೆಂಡತಿಯ ಮರಣದ ದುಃಖದಿಂದ ಹೇಗೆ ಹೊರಬಂದರು?
23. ಆದ್ಯ ರಂಗಾಚಾರ್ಯರ ತಂದುಕೊಟ್ಟ ಪುಸ್ತಕಗಳು ಬೀಚಿಯವರ ಮೇಲೆ ಅತ್ಯಂತ ಪ್ರಭಾವ ಬೀರಿತೇಕೆ?
24. ಬೀಚಿಯವರು ಸಂಧ್ಯಾರಾಗ ಪುಸ್ತಕವನ್ನು ಓದಿದ ಸಂದರ್ಭವನ್ನು ಕುರಿತು ಬರೆಯಿರಿ.
25. ಸಿ.ಪಿ.ಕೆಯವರು ತಮ್ಮ ಅಹಂಕಾರವು ಗ್ರಂಥಾಲಯದಲ್ಲಿ ಮುದುಡಿ ಹೋಗುವುದೆಂದು ಏಕೆ ಹೇಳಿದ್ದಾರೆ?
26. ಸಿ.ಪಿ.ಕೆಯವರು ಭೀತವಿಸ್ಮಿತರಾಗಿ ತತ್ತರಿಸಿದ ಸನ್ನಿವೇಶವನ್ನು ಕುರಿತು ಬರೆಯಿರಿ.
27. ನದಿಯ ದಟದಲ್ಲಿದ್ದವರಿಗೆ ಆಶ್ಚರ್ಯವುಂಟಾಗುವ ಸನ್ನಿವೇಶವನ್ನು ಪುರಂದರದಾಸರು ಹೇಗೆ ವರ್ಣಿಸಿದ್ದಾರೆ?
28. ಧರ್ಮಪದನಿಗೆ ರೊಟ್ಟಿಕೊಟ್ಟವನ ಕತ್ತಿನ ಪಟ್ಟಿಯನ್ನು ಹಿಡಿದು ಮಾತಾಡಿಸಬೇಕು ಎನಿಸಿತೇಕೆ?
29. ತುಳಜಾಬಾಯಿಯು ಧ್ವಜಹಿಡಿದುಕೊಂಡು ಗೋಳಾಡುತ್ತಾ ಬಂದುದೇಕೆ?
30. ಈರಪ್ಪ ಕಂಬಳಿಯವರು ಕೆಂಪುಬಸ್ಸನ್ನು ನೆಚ್ಚಿದ್ದರಿಂದ ಇಡೀದಿನವನ್ನು ವ್ಯಯಿಸಬೇಕಾಯಿತು ಏಕೆ?

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ. 04X03=12**

31. "ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರು"
32. "ಬೆಟ್ಟದ ಮೇಲೆ ಜಗ್ಗಿಸಿ ಹುಯ್ಯೋ ಮಳೆರಾಯ"
33. "ನನ್ನ ವಶದಲ್ಲಿಯೇ ಒಂದು ಲಾಕಪ್ ಇದೆ"
34. "ಕಂಡ ಕನಸುಗಳ ಕಟ್ಟೇ ಕಟ್ಟತೇವ"

**VI. ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 04X03=12**

35. ಶರೀಫರ ತತ್ವಪದಗಳ ವೈಶಿಷ್ಟ್ಯವನ್ನು ವಿವರಿಸಿರಿ?
36. ಶಿವಾಜಿಯು "ದೇವಿ ನನ್ನ ಅಪರಾಧವನ್ನು ಕ್ಷಮಿಸು" ಎಂದು ಮಲ್ಲಮ್ಮಾಜಿಯನ್ನು ಕೇಳಿಕೊಂಡಿದ್ದೇಕೆ?
37. ಮನುಷ್ಯನು ದೈವ ಕೃಪೆಗೆ ಪಾತ್ರರಾಗಲು ಬಸವಣ್ಣನವರು ತೋರಿಸಿರುವ ಮಾರ್ಗವು ಪ್ರಶಂಸನೀಯವಾದುದು ಹೇಗೆ? ವಿವರಿಸಿರಿ.
38. ಪುರಂದರದಾಸರು ಡಾಂಭಿಕನ ಭಕ್ತಿಯನ್ನು ಹೇಗೆ ವರ್ಣಿಸಿದ್ದಾರೆ? ನಿಮ್ಮ ಮಾತುಗಳಲ್ಲಿ ಬರೆಯಿರಿ.

**VII. ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ, ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 02X03=06**

39. ರಾಮಸ್ವಾಮಿ ಅಯ್ಯಂಗಾರ್

40. ಸತೀಶ್ ಕುಲಕರ್ಣಿ

**VIII. ಕೆಳಗಿನ ಗಾದೆಯನ್ನು ವಿಸ್ತರಿಸಿ ಬರೆಯಿರಿ.** **01X03=03**

41. ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ

**ಅಥವಾ**

ಉಪ್ಪು ತಿಂದವನು ನೀರುಕುಡಿಯಲೇ ಬೇಕು

**IX. ಕೆಳಗಿನ ಪ್ರಶ್ನೆಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **01X04=04**

42. ರಾಮಸಿಂಗನ ದೇಶಾಭಿಮಾನವನ್ನು ನಿಮ್ಮ ಮಾತುಗಳಲ್ಲಿ ವರ್ಣಿಸಿರಿ.

**ಅಥವಾ**

ರಾಮಸಿಂಗನ ಮೇಲೆ ಗುಂಡು ಹಾರಿಸಿದುದನ್ನು ಸೋಮಣ್ಣನು ಹೇಗೆ ವಿರೋಧಿಸಿದನು? ವಿವರಿಸಿರಿ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **01X04=04**

43. ನಾವು ---------- ಇವರು

--------------------

ಭೂಮಿ --------------

---------------- ಇಂದೆ

**ಅಥವಾ**

ಆಂಗ್ಲ ----------------

ಹರಿವ-----------------

-------ರಾಗಿ-----------

---------------- ಒಂದೆ

**XI. ಕೆಳಗಿನ ಪದ್ಯಭಾಗದ ಸಾರಾಂಶವನ್ನು ಬರೆಯಿರಿ.** **01X04=04**

44. ಬಾಣ ಬಿರುಸು, ಕುಂಡ, ಹಣತೆ
ಬೆಳಕ ಸತ್ವ ಒಂದೆ.
ಕಂದ ವೃತ್ತ ತ್ರಿಪದಿ ವಚನ
ರಸ ಕವಿತ್ವ ಒಂದೆ.

**XII. ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **01X05=05**

ಹಬ್ಬಗಳೆಂದರೆ ಸಡಗರ, ಸಂತಸ, ಸಮೃದ್ಧಿ. ಭಾರತೀಯ ಸಂಸ್ಕೃತಿಯಲ್ಲಿ ಹಬ್ಬಗಳು ತುಂಬ ಮಹತ್ವದ ಸ್ಥಾನ ಪಡೆದಿವೆ. ಅವು ನಮ್ಮ ಧಾರ್ಮಿಕ ಶ್ರದ್ಧೆಯ ಸಂಕೇತವಾಗಿ ಶತಮಾನಗಳಿಂದಲೂ ಉಳಿದುಕೊಂಡು

ಬಂದಿವೆ. ಹಬ್ಬಗಳಿಗೆ ನಂಬಿಕೆ ಹಾಗೂ ಆಚರಣೆ ಎಂಬ ಎರಡು ಮುಖಗಳಿದ್ದು, ಅವು ಪರಸ್ಪರ ಪೂರಕ ಅಂಶಗಳಾಗಿವೆ. ನಂಬಿಕೆ ಧೃಡವಾಗಿದ್ದರೆ ಮಾತ್ರ ಆಚರಣೆ ಫಲಪ್ರದವಾಗಲು ಸಾಧ್ಯ. ಇಂಥ ನಂಬಿಕೆಯುಳ್ಳ ಭಾರತೀಯರು ಅನೇಕ ಹಬ್ಬಗಳನ್ನು ಆಚರಿಸಿಕೊಂಡು ಬಂದಿದ್ದಾರೆ. ಭಾರತೀಕ ಹಬ್ಬಗಳು ಪ್ರಕೃತಿಯೊಡನೆ ನಿಕಟ ಸಂಬಂಧವನ್ನು ಹೊಂದಿರುವುದರಿಂದ ಪ್ರಕೃತಿಯ ರಕ್ಷಣೆಗೆ ಪ್ರೋತ್ಸಾಹವನ್ನು ನೀಡುತ್ತವೆ. ಜೊತೆಗೆ ಸೌಹಾರ್ದ ಮನೋಭಾವವನ್ನು ಬೆಳೆಸಿ, ಬದುಕಿನಲ್ಲಿ ಸಾಮರಸ್ಯವನ್ನು ಮೂಡಿಸುತ್ತವೆ.

45. **ಪ್ರಶ್ನೆಗಳು :**

1. ಆಚರಣೆಯು ಯಾವಾಗ ಫಲಪ್ರದವಾಗುವುದು?
2. ಭಾರತೀಯ ಹಬ್ಬಗಳು ಯಾವುದರ ಸಂಕೇತವಾಗಿವೆ?
3. ಭಾರತೀಯ ಹಬ್ಬಗಳ ಮಹತ್ವವೇನು?
4. ಹಬ್ಬಗಳು ಪ್ರಕೃತಿಯ ಉಳಿವಿಗೆ ಹೇಗೆ ಸಹಾಯಕವಾಗಿವೆ?
5. ಹಬ್ಬಗಳಿಗಿರುವ ಎರಡು ಮುಖಗಳಾವುವು?

**XIII. ಕೆಳಗಿನ ವಿಷಯವನ್ನು ಕುರಿತು ಹತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.** **01X05=05**

46. ವಿದ್ಯಾರ್ಥಿಗಳ ಜೀವನದಲ್ಲಿ ಪರೀಕ್ಷೆಗಳ ಪಾತ್ರ

**ಅಥವಾ**

ರಾಷ್ಟ್ರೀಯ ಸ್ಮಾರಕಗಳ ಸಂರಕ್ಷಣೆ

**XIV. ಕೆಳಗಿನ ಸೂಚನೆಗೆ ಅನುಗುಣವಾಗಿ ಪತ್ರವನ್ನು ಬರೆಯಿರಿ.** **01X05=05**

47. ನಿಮ್ಮನ್ನು ಆದರ್ಶ ಪ್ರೌಢಶಾಲೆಯಲ್ಲಿ ಓದುತ್ತಿರುವ ತೇಜು ಎಂದು ಭಾವಿಸಿಕೊಂಡು ಉಡುಪಿಯಲ್ಲಿರುವ ನಿಮ್ಮ ತಂದೆಯವರಿಗೆ ಶಾಲಾ ಪ್ರವಾಸದ ಸಲುವಾಗಿ ಹಣಕಳಿಸುವಂತೆ ಕೋರಿ ಒಂದು ಪತ್ರ ಬರೆಯಿರಿ.

**ಅಥವಾ**

ಬಾಗಲಕೋಟೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ನಿಮ್ಮನ್ನು ಶಶಿಕಿರಣ ಎಂದು ಭಾವಿಸಿಕೊಂಡು, ಸೂಕ್ತ ಕಾರಣವನ್ನು ತಿಳಿಸಿ, ವರ್ಗವಣಾ ಪತ್ರವನ್ನು ಕೊಡುವಂತೆ ಕೋರಿ ನಿಮ್ಮ ಮುಖ್ಯೋಪಾಧ್ಯಾಯರಿಗೆ ಒಂದು ಪತ್ರವನ್ನು ಬರೆಯಿರಿ.

******************

# ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ
# 2019–20ನೆಯ ಸಾಲಿನ ಮಾದರಿ ಪ್ರಶ್ನೆ ಪತ್ರಿಕೆ–02

**ವಿಷಯ: ತೃತೀಯ ಭಾಷೆ ಕನ್ನಡ** **ವಿಷಯ ಸಂಕೇತ: 62K**

**ಅವಧಿ : 2 ಗಂಟೆ 45ನಿಮಿಷಗಳು** **ಗರಿಷ್ಠ ಅಂಕಗಳು : 100**

[ಖಾಸಗಿ ಅಭ್ಯರ್ಥಿಗಳಿಗಾಗಿ]

**ಸೂಚನೆಗಳು :**

- ಉತ್ತರಗಳು ನೇರವೂ, ಸ್ಪಷ್ಟವೂ ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.
- ವಸ್ತುನಿಷ್ಠ ಪ್ರಶ್ನೆಗಳಿಗೆ, ಹೊಡೆದು, ಅಳಿಸಿ, ಕೆರೆದು ಬರೆದ ಉತ್ತರಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.
- ಪೆನ್ಸಿಲ್ ಬಳಸಿ ಬರೆದ ಉತ್ತರಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **10X1=10**

1) ಕೊಡಗಿನ ಗೌರಮ್ಮನವರ ತಂದೆಯ ಹೆಸರು:

(ಎ) ಎನ್.ಎಸ್. ರಾಮಯ್ಯ (ಬಿ) ಜಿ. ಎಂ. ಮಂಜುನಾಥಯ್ಯ

(ಸಿ) ಬಿ.ಟಿ. ಗೋಪಾಲಕೃಷ್ಣಯ್ಯ (ಡಿ) ಮಾಸ್ತಿ ವೆಂಕಟೇಶ ಅಯ್ಯಂಗಾರ್

2) ಸತೀಶ ಕುಲಕರ್ಣಿಯವರು ಕಟ್ಟುತ್ತೇವೆಂದಿರುವ ಮನುಕುಲ:

(ಎ) ಕುಲವೆನ್ನುವ ಮನುಕುಲ (ಬಿ) ಕುಲವೆನ್ನದ ಮನುಕುಲ

(ಸಿ) ಕುಲದಂತಿರುವ ಮನುಕುಲ (ಡಿ) ಕುಲೀನ ಮನುಕುಲ

3) ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳು:

(ಎ) ಕಚಟತಪ (ಬಿ) ಗಜಡದಬ

(ಸಿ) ಖಝಠಥಫ (ಡಿ) ಙಞಣನಮ

4) ತುಳಿಯುತೇವೆ ಪದದ ಗ್ರಾಂಥಿಕರೂಪ:

(ಎ) ತುಳಿಯುವುದಿಲ್ಲ (ಬಿ) ತುಳಿಯದ ಹಾಗೆ

(ಸಿ) ತುಳಿಯುತ್ತೇವೆ (ಡಿ) ತುಳಿಯುವಂತೆ

5) ಮಳೆಯ ನೀರಿನಲ್ಲಿ ಮೊಸಳೆಗಳು <u>ಸರಸರನೆ</u> ಹರಿದಾಡಿದವು–ಗೆರೆ ಎಳೆದ ಪದವು:

(ಎ) ಜೋಡುನುಡಿ (ಬಿ) ದ್ವಿರುಕ್ತಿ

(ಸಿ) ನುಡಿಗಟ್ಟು (ಡಿ) ಅನುಕರಣಾವ್ಯಯ

6) ಭಾವಸೂಚಕ ಲೇಖನ ಚಿಹ್ನೆಯನ್ನು ಬಳಸ ಬೇಕಾಗಿರುವ ವಾಕ್ಯ:

(ಎ) ಅವರ ದೇಶ ಯಾವುದು (ಬಿ) ಅಯ್ಯೋ ದೇವರೆ ಹೀಗಾಗ ಬಾರದಿತ್ತು

(ಸಿ) ಡಂಗುರ ಸಾರಿದ್ದನ್ನು ಕೇಳಿಲ್ಲವೇ (ಡಿ) ಗೌರಿಯ ಮುಖ ಕಮಲದಂತಿದೆ

7) ಸೂರ್ಯೋದಯವಾದೊಡನೆಯೇ ಪ್ರತಿಯೊಂದು ದೇವಾಲಯದಲ್ಲೂ ಹವನಹೋಮಾದಿಗಳು ನೆರವೇರಿದವು.-ಈ ವಾಕ್ಯದಲ್ಲಿರುವ ಗುಣಸಂಧಿ ಪದ:

(ಎ) ಸೂರ್ಯೋದಯ (ಬಿ) ಪ್ರತಿಯೊಂದು

(ಸಿ) ದೇವಾಲಯ (ಡಿ) ಹವನಹೋಮಾದಿಗಳು

8) ಬಿಸಿಲು ಬಂತು ನೆರಳು ಬಂತು ಗಾಳಿ ಬಿಚ್ಚಿ ಬೀಸಿತು
ಒಮ್ಮೆ ಹಸಿರು ಒಮ್ಮೆ ಹೊನ್ನು ಹಚ್ಚಡವನು ಹಾಸಿತು : ಈ ಪದ್ಯದಲ್ಲಿರುವ ಅಂತ್ಯಪ್ರಾಸ:

(ಎ) ಬಿಸಿಲು-ನೆರಳು (ಬಿ) ಬೀಸಿತು-ಹಾಸಿತು

(ಸಿ) ಹಸಿರು-ಹೊನ್ನು (ಡಿ) ಒಮ್ಮೆ-ಒಮ್ಮೆ

9) ಕೆಳಗಿನವುಗಳಲ್ಲಿ ಬಹುವಚನ ಪದ:

(ಎ) ಆಕಳು (ಬಿ) ಸರಳು

(ಸಿ) ಎರುಳು (ಡಿ) ಮಕ್ಕಳು

10) ಧರ್ಮ ಪದದ ವಿರುದ್ಧಾರ್ಥಕ ಪದ:

(ಎ) ಸಧರ್ಮ (ಬಿ) ಸುಧರ್ಮ

(ಸಿ) ಅಧರ್ಮ (ಡಿ) ಸದ್ಧರ್ಮ

**II. ಕೆಳಗಿನ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **05X1=05**

11) ಹಳಗನ್ನಡ : ಕರ್ಮಧಾರೆಯ ಸಮಾಸ : : ಕಸಕಡ್ಡಿ :-----

12) ದಿಟ್ಟಿ : ದೃಷ್ಟಿ : : ಅಚ್ಚರಿ : -----

13) ಹಿರಿಬಾಳುಗಳ ಪುಸ್ತಕಾವಲೋಕನಕ್ಕೆ ತತ್ತರಿಸಿದ್ದು:ಸಿ.ಪಿ.ಕೆ: :ವಿಶ್ವರೂಪಾವಲೋಕನಕ್ಕೆ ತತ್ತರಿಸಿದ್ದು:---

14) ಗುಂಡಪ್ಪನವರ ತಿಮ್ಮ : ಸೂರ್ಯ : : ಬೀಚಿಯವರ ತಿಂಮ : -----

15) ಷಾ ಅಬ್ಬಾಸ್ : ಬಾಗ್ದಾದಿನ ದೊರೆ : : ಪಿತ್ರೋ :------

**III. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **05X01=05**

16) ಉಲ್ಲಾಳವನ್ನು ಆಳಿದ ಪ್ರಸಿದ್ಧರಾಣಿ ಯಾರು?

17) ಉದರ ವೈರಾಗ್ಯವೆಂದರೇನು?

18) ಈರಪ್ಪ. ಎಂ. ಕಂಬಳಿಯವರು ಯಾವ ಊರಿಗೆ ಹೊರಟ್ಟಿದ್ದರು?

19) ಧರ್ಮಪದನು ಯಾವ ದೇವಾಲಯಕ್ಕೆ ಬಂದಿದ್ದನು?

20) ರಾಮಸಿಂಗನ ತಾಯಿಯ ಹೆಸರೇನು?

**IV.** ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. **10X02=20**

21) ಟ್ರಾಫಿಕ್ ಪೊಲೀಸರು ಗೊರೂರರನ್ನು ಹೇಗೆ ಉಪಚರಿಸಿದರು?

22) ಶರೀಫರ ಬಾಲ್ಯವು ಹಿಂದೂ ಪರಂಪರೆಯೊಂದಿಗೆ ಹೇಗೆ ಬೆರೆತುಹೋಗಿತ್ತು?

23) ಪೊಲೀಸರ ದೊಡ್ಡ ಪಡೆಯು ಮೋಹನಪುರಕ್ಕೆ ಏಕೆ ಬಂದಿತು?

24) ರಾಮಸಿಂಗನಿಗೂ ಶಿಪಾಯಿಗಳಿಗೂ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

25) 'ಬೆಳಕ ಸತ್ವ ಒಂದೇ' ಎನ್ನುವುದಕ್ಕೆ ನಿಸಾರ್ ಅಹಮದ್ ಅವರು ನೀಡಿರುವ ನಿದರ್ಶನಗಳಾವುವು?

26) ರೈತರು ತಮ್ಮ ಕಷ್ಟವನ್ನು ಮಳೆರಾಯನಲ್ಲಿ ಹೇಗೆ ನಿವೇದಿಸಿಕೊಂಡರು?

27) ಮೋಡಗಳು ಕಾಣಿಸಿಕೊಂಡಾಗ ರೈತನಿಗಾದ ಸಂತೋಷವನ್ನು ಜನಪದರು ಹೇಗೆ ವರ್ಣಿಸಿದ್ದಾರೆ?

28) ಸೋಮೇಶ್ವರ ಶತಕದಲ್ಲಿ ಹೇಳಿರುವಂತೆ ಯಾವಗುಣವನ್ನು ಹೊಂದಿದವರು ಯಾವ ಹೆಸರಿಗೆ ಅರ್ಹರಾಗುತ್ತಾರೆ?

29) ವಿಶ್ವಾಮಿತ್ರ ಸೃಷ್ಟಿಯು ಬೀಚಿಯವರ ಮೇಲೆ ಹೇಗೆ ಪ್ರಭಾವ ಬೀರಿತು?

30) ಸಾವೇ ಭುಜಸವರಿಕೊಂಡು ಹೋದಂತೆ ಲೇಖಕರಿಗೆ ಭಾಸವಾದ ಸನ್ನಿವೇಶಯಾವುದು?

**V.** ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ. **04X03=12**

31) "ನಾನು ಏನು ಮಾಡಿದರೂ ಕಾನೂನು ಬಿಟ್ಟು ಹೋಗುವುದಿಲ್ಲ"

32) "ಎನಿತು ಹಿರಿಬಾಳುಗಳ ಮೇಳ ನೆರೆದಿಹುದಿಲ್ಲಿ!"

33) "ದೇಹದಲ್ಲಿ ಪ್ರಾಣವಿರುವವರೆಗೆ ಇದನ್ನು ಕೆಳಗಿಡಲಾರೆ."

34) "ಅರಿವೆಯ ಮುಸುಕನು ಮೋರೆಗೆ ಹಾಕಿ"

**VI.** ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರ ಬರೆಯಿರಿ. **04X03=12**

35) ಶರೀಫರು ಮತ್ತು ಗೋವಿಂದ ಭಟ್ಟರ ನಡುವಿನ ಸಂಬಂಧವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

36) ಬೀಚಿಯವರು ಡಿ.ವಿ.ಜಿಯವರ 'ಮಂಕುತಿಮ್ಮನ ಕಗ್ಗ'ವನ್ನು ಏಕೆ ಮೆಚ್ಚಿಕೊಂಡಿದ್ದರು?

37) 'ಕಟ್ಟತೇವ ನಾವು' ಪದ್ಯದ ಆಶಯವೇನು?

38) ಜೀವರಸ ಒಂದೇ ಎಂಬ ಭಾವನೆ ಭೂಮಿತಾಯ ಕುಡಿಗಳು ಕವನದಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿರಿ.

**VII.** ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ, ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. **02X03=06**

39) ಡಾ॥ ವಿಜಯಲಕ್ಷ್ಮೀ ಬಾಳೇಕುಂದ್ರಿ

40) ಪುರಂದರದಾಸರು

**VIII. ಕೆಳಗಿನ ಗಾದೆಯನ್ನು ವಿಸ್ತರಿಸಿ ಬರೆಯಿರಿ.** **01X03=03**

41) ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ

**ಅಥವಾ**

ಕಣ್ಣಾರೆ ಕಂಡರೂ ಪರಾಂಬರಿಸಿ ನೋಡು

**IX. ಕೆಳಗಿನ ಪ್ರಶ್ನೆಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **01X04=04**

42) ಗಾಂಧೀಜಿಯವರು ಕೊಡಗಿನಲ್ಲಿ ತಂಗಿದ್ದಾಗ ನಡೆದ ಸಂಗತಿಗಳನ್ನು ಕುರಿತು ಬರೆಯಿರಿ.

**ಅಥವಾ**

'ಕೊಡಗಿನ ಗೌರಮ್ಮನವರು ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರು' ಈ ಹೇಳಿಕೆಯನ್ನು ಸಮರ್ಥಿಸಿರಿ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **01X04=04**

43) ಕಳಬೇಡ -------------

-------------------

-------------------

----------------ಶುದ್ಧಿ

**ಅಥವಾ**

ದೇವಲೋಕ ---------------

----------------------

----------------------

-----------------ಪ್ರಮಾಣು

**XI. ಕೆಳಗಿನ ಪದ್ಯಭಾಗದ ಸಾರಾಂಶವನ್ನು ಬರೆಯಿರಿ.** **01X04=04**

ಕಣ್‌ದಿಟ್ಟಿ ಹರಿದತ್ತ ಗ್ರಂಥಗಿರಿ ಪಂಕ್ತಿಗಳು<br>
ನಿಂತು ಬೆರಗೀಯುತಿವೆ ಪುಸ್ತಕಾಲಯದಲ್ಲಿ;<br>
ಇವುಗಳಡಿ ನಾಧೂಳ ಕಣವಾಗಿ ನಿಲ್ಲುವೆನು-<br>
ಚಣಕಾಲ ಬಂದು ನಿಂತರೆ ಸಾಕು, ನನ್ನ ಮತಿ<br>
ಮುದುಡಿ ಹೋಗುವುದಿಲ್ಲಿ;

**XII. ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **01X05=05**

ಗುರುಕುಲದಲ್ಲಿ ಮಹಾಗುರುಗಳು ತಮ್ಮ ಶಿಷ್ಯರಿಗೆ ಒಂದು ಪರೀಕ್ಷೆಯನ್ನು ಏರ್ಪಡಿಸಿದರು. ಶಿಷ್ಯರು ಹೋಗುವ ದಾರಿಯಲ್ಲಿ ಗಾಜುಗಳನ್ನು ಎರಚಿ ಏನು ಮಾಡುತ್ತಾರೆಂದು ಅವರಿಗೆ ತಿಳಿಯದಂತೆ ವೀಕ್ಷಿಸಿದರು. ಮೊದಲ ಗುಂಪಿನವರು ಗಾಜುಗಳನ್ನು ದಾಟಿ ಹೋದರು. ಎರಡನೆಯ ಗುಂಪಿನವರು

ಗಾಜನ್ನು ತುಳಿಯದೆ ಬಳಸಿಕೊಂಡು ಹೋದರು. ಮೂರನೆಯ ಗುಂಪಿನವರು ಗಾಜುಗಳನ್ನು ಆಯ್ದು ದಾರಿಯನ್ನು ಶುಚಿಗೊಳಿಸಿ ಮುಂದೆ ಸಾಗಿದರು. ಮೂರನೆಯ ಗುಂಪಿನವರಿಗೆ ಗುರುಗಳು ಆಶೀರ್ವಾದ ಮಾಡಿ ನೀವು ಕಲಿತದ್ದು ಮುಗಿಯಿತು ನಿಮ್ಮ ಊರಿಗೆ ತೆರಳಬಹುದೆಂದರು. ತೊಂದರೆಯನ್ನು ನಿವಾರಿಸುವ ಬುದ್ಧಿ ಬಂದರೆ ಅದು ಸದ್ವಿದ್ಯೆ. ಯಾರಿಗೆ ಏನಾದರೂ ಆಗಲಿ ನನಗೇನು ಎಂಬ ಭಾವನೆ ಬಂದರೆ ಅದು ಬರೀ ವಿದ್ಯೆ. ನಾನು ಮಾತ್ರವೇ ಚೆನ್ನಾಗಿರಬೇಕು ಎಂಬ ಭಾವನೆ ಮೂಡಿದರೆ ಅದು ದುರ್ವಿದ್ಯೆ. ವಿದ್ಯೆಯೆಂಬುದು ಬರೀ ಮನಸ್ಸಿನ ಸರಕಲ್ಲ; ಬುದ್ಧಿಯ ಸರಕಲ್ಲ; ಅದು ಅಂತಃಕರಣಕ್ಕೆ ಸಂಬಂಧಪಟ್ಟ ಸರಕು. ದಯೆ, ಕರುಣೆ, ಮರುಕ, ಅನುಕಂಪ ಇವೆಲ್ಲವೂ ಸದ್ಬುದ್ಧಿಯ ಸಂತಾನಗಳು.

44) **ಪ್ರಶ್ನೆಗಳು :**

1. ಗುರುಗಳು ಮೂರನೆಯ ಗುಂಪಿನವರಿಗೆ ಏಕೆ ಆಶೀರ್ವಾದ ಮಾಡಿದರು ?
2. ದುರ್ವಿದ್ದೆಯವರ ಮನಸ್ಸು ಯಾವರೀತಿ ಇರುತ್ತದೆ ?
3. ಸದ್ಬುದ್ಧಿಯ ಸಂತಾನಗಳು ಯಾವುವು ?
4. ಬರಿ ವಿದ್ಯೆಯೆಂದು ಯಾವುದನ್ನು ಪರಿಗಣಿಸ ಬಹುದು ?
5. ಸದ್ವಿದ್ಯೆ ಯಾವುದು?

**XIII. ಕೆಳಗಿನ ವಿಷಯವನ್ನು ಕುರಿತು ಹತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ. 01X05=05**

45) ಗಣಕಯಂತ್ರ

**ಅಥವಾ**

ಪ್ರಕೃತಿವಿಕೋಪ

**XIV. ಕೆಳಗಿನ ಸೂಚನೆಗೆ ಅನುಗುಣವಾಗಿ ಪತ್ರವನ್ನು ಬರೆಯಿರಿ. 01X05=05**

46) ನಿಮ್ಮನ್ನು ಯಾದಗಿರಿ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ಪೂಜ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ ಸ್ವಾತಂತ್ರ್ಯ ದಿನಾಚರಣೆಯನ್ನು ಕುರಿತು ಹಾಸನದಲ್ಲಿರುವ ನಿಮ್ಮ ಗೆಳತಿಗೆ ಒಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಶಿವನಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಸಿದ್ದಾರ್ಥನೆಂದು ಭಾವಿಸಿಕೊಂಡು, ನಿಮ್ಮ ಬಡಾವಣೆಯಲ್ಲಿ ಕೆಟ್ಟುಹೋಗಿರುವ ವಿದ್ಯುತ್ ದೀಪಗಳನ್ನು ಸರಿಪಡಿಸುವಂತೆ ಕೋರಿ ಕೆ.ಪಿ.ಟಿ.ಸಿ.ಎಲ್ ಅಧಿಕಾರಿಗಳಿಗೆ ಮನವಿಮಾಡಿಕೊಂಡು ಒಂದು ಪತ್ರವನ್ನು ಬರೆಯಿರಿ.

*********************